## ಪಾಠ–11

## ಯೇಸು ಕ್ರಿಸ್ತನು ತನ್ನ ಸೇವೆಗೋಸ್ಕರ ಸಿದ್ಧವಾಗುವುದು

ದೇವರೊಂದಿಗೆ ಮನುಷ್ಯನಿಗೆ ಇರುವ ಪರಿಪೂರ್ಣ ಸಂಭಂದವನ್ನು ಕಳೆದು ಕೊಳ್ಳುವುದಕ್ಕೆ ಕಾರಣವಾದ ಆದಾಮನ ಪಾಪದ ನಂತರ ದೇವರೊಂದಿಗೆ ತಿರಿಗಿ ಸಮಾಧಾನ ಪಡುವ ಅವಶ್ಯಕತೆಯನ್ನು ಹೊಂದಿದ್ದಾನೆ. ಮನುಷ್ಯರ ಪಾಪಗಳನ್ನು ಮತ್ತು ಅಪರಾಧಗಳನ್ನು ತೊಳೆದು ಹಾಕಬೇಕು ಎಂದು ಸರಿಯಾದ ಸಮಯಕ್ಕೆ ಪವಿತ್ರಾತ್ಮನ ಮೂಲಕ ದೇವರ ಮಗನು ಶರೀರವನ್ನು ಶರೀರಧಾರಿಯಾಗಿ ಮನುಷ್ಯರ ಮಧ್ಯೆ ಜೀವಿಸಿದನು.

ಮನುಷ್ಯರ ಸಂಪರ್ಕವಿಲ್ಲದೆ ಗರ್ಭವನ್ನು ಧರಿಸುವಂತೆ ಪವಿತ್ರಾತ್ಮನು ಒಂದು ಅದ್ಭುತವನ್ನು ಮಾಡಿದನು ದೇವರ ಅಭಿಷಕ್ತನು ಅಂದರೆ ಮಾನವ ಜನಾಂಗವನ್ನು ಅವರ ಪಾಪಗಳಿಂದ ರಕ್ಷಿಸುವುದಕ್ಕೆ ಭೂಲೋಕಕ್ಕೆ ಮೆಸ್ಸಿಯಾನನ್ನು ಹೇಗೆ ಕಳುಹಿಸ ಬೇಕೆಂದು ಗಬ್ರಿಯೇಲ ದೂತನ ಮುಖಾಂತರ ಮತ್ತು ಒಬ್ಬ ದೂತನ ಮೂಲಕ ಯೊಸೇಫನಿಗೆ ದೇವರು ತಿಳಿಸಿದನು. ಇದನ್ನು ಕುರಿತು ಜನರು ತಮ್ಮನ್ನು(ಯೂಸೇಫನು ಮತ್ತು ಮರಿಯಳು) ಕುರಿತು ಹೇಗೆ ಮಾತನಾಡಿಕೊಳ್ಳುತ್ತಾರೊ ಅಥವಾ ಇದು ನಡೆಯುವುದರಿಂದ ಇತರರು ಏನು ಅಂದುಕೊಳ್ಳುತ್ತಾರೊ ಎಂದು ಅಂದುಕೊಳ್ಳದೆ ಇವರಿಬ್ಬರೂ ದೇವರಿಗೆ ಮಾತ್ರ ವಿಧೇಯರಾದರು ಆದ್ದರಿಂದ ದೇವರೊಂದಿಗೆ ನಡೆಸಲ್ಪಟ್ಟರು.

"ಶಕ್ತನಾಗಿರುವಾತನು ನನಗೆ ದೊಡ್ಡ ಉಪಕಾರಗಳನ್ನು ಮಾಡಿದ್ದಾನೆ: ಆತನ ನಾಮವು ಪರಿಶುದ್ಧವಾದದ್ದು. ಆತನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ತಲತಲಾಂತರದ ವರೆಗೂ ಇರುವುದು"(ಲೂಕ2:49–50).

30ವರ್ಷಗಳಿರುವಾಗ "ಜನೆರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಯೇಸು ಸಹ ದೀಕ್ಷಾಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು; ಮತ್ತು ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ ಮೇಲೆ ಇಳಿದನು"(ಲೂಕ3:21).

ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡ ನಂತರ "ಯೇಸು ಪವಿತ್ರಾತ್ಮ ಭರಿತನಾಗಿ ಯೊರ್ದನ್ ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ನಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಡುತ್ತಾ ಸೈತಾನನಿಂದ ಶೋಧಿಸಲ್ಪಟ್ಟನು. ಆ ದಿವಸಗಳಲ್ಲಿ ಆತನು ಏನೂ ತಿನ್ನಲಿಲ್ಲ. ಅವು ಕಳೆದ ಮೇಲೆ ಆತನಿಗೆ ಹಸಿವಾಯಿತು"(ಲೂಕ4:1–2). ಆತನು ಸೈತಾನನಿಂದ ಶೋಧಿಸಲ್ಪಟ್ಟ ನಂತರ ನಜರೇತಿನ ತನ್ನ ಮನೆಗೆ ಹೋದನು. ಅವರ ಸಮಾಜ ಮಂದಿರದಲ್ಲಿ ಶಾಸ್ತ್ರಭಾಗವನ್ನು ಓದುತ್ತಾ "ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ, ಆತನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು; ಮನಮುರಿದವರನ್ನು ಕಟ್ಟಿ

ವಾಸಿಮಾಡುವುದಕ್ಕೂ ಸೆರೆಯವರಿಗೆ ಬಿಡುಗಡೆಯಾಗುವುದನ್ನು, ಬಂದಿಗಳಿಗೆ [ಕದ]ತೆರೆಯುವುದನ್ನು ಪ್ರಸಿದ್ಧಿಪಡಿಸುವುದಕ್ಕೂ ಯೆಹೋವನು ನೇಮಿಸಿರಿವ ಶುಭ ವರುಷವ, ನಮ್ಮ ದೇವರು ಮುಯ್ಯಿ ತೀರಿಸುವ ದಿನ, ಇವುಗಳನ್ನು ಪ್ರಚುರ ಪಡಿಸುವುದಕ್ಕೂ ದುಃಖಿತರೆಲ್ಲರನ್ನು ಸಂತೈಸುವುದಕ್ಕೂ ಚೀಯೊನಿನಲ್ಲಿ ಶೋಕಿಸುವವರಿಗೆ ಬೂದಿಗೆ ಬದಲಾಗಿ ಶಿರೋಭೋಶಣ ದುಃಖವಿದ್ದಲ್ಲಿ ಆನಂದ ತೈಲ ಕುಂದಿದ ಮನಕ್ಕೆ ಪ್ರತಿಯಾಗಿ ಉತ್ಸಾಹ ಸ್ತೋತ್ರದ ವಸ್ತ್ರ ಇವುಗಳನ್ನು ಒದಗಿಸಿಕೊಡುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ."(ಯೆಶಾಯ61:1–2).

ಮೆಸ್ಸಿಯಾ ಬರುತ್ತಾನೆ ದೇವರ ವಾಗ್ದಾನವನ್ನು ನೆರವೇರುಸುತ್ತಾನೆ ಎಂದು ಅವರಿಗೆ ಪ್ರಕಟಿಸಿದನು, ಸ್ವಲ್ಪ ಸಮಯವಾದ ನಂತರ ತನ್ನ ಸುವಾರ್ತೆ ಸಂದೇಶವನ್ನು ಪುನರುತ್ಥಾನದ ನಂತರ ಪ್ರಕಟಿಸುವವರನ್ನು ನಂತರ ಆಯ್ಕೆ ಮಾಡಿಕೊಳ್ಳಲು ಪ್ರಾರಂಭಿಸಿದನು.

ಕಾಲವು ಪರಿಪೂರ್ಣವಾದ ಮೇಲೆ ದೇವರ ಮಗನು ಭೂಲೋಕಕ್ಕೆ ಬಂದನು ಮನುಷ್ಯರ ಮಧ್ಯೆ ಜೀವಿಸಿ ತನ್ನನ್ನು ಕುರಿತು ತಿಳಿದವರಿಗೆ ಮೆಸ್ಸಿಯಾನಾಗಿ ಗುರ್ತಿಸಿ ಕೊಂಡಿದ್ದಾನೆ ಮತ್ತು ಮಾನವರ ಪಾಪಗಳಿಗೋಸ್ಕರ ಪರಿಪೂರ್ಣ ಬಲಿಯಾಗಿ ಸಮರ್ಪಿಸಿಕೊಂಡನು. ತನ್ನ ಸಂಪೂರ್ಣ ಭೂಲೋಕ ಜೀವಿತದಲ್ಲಿ ಜನರ ಸಮೂಹದ ನಡುವೆ ಬಹಿರಂಗವಾಗಿ ಆತನು ಮಾಡಿದ ಅದ್ಭುತಗಳು ಮತ್ತು ಸ್ಥಾನಿಕನಾದ ಯೋಹಾನನ ಮೂಲಕ ಹೇಳಿರುವ ಪ್ರವಚನಗಳನ್ನು ನೆರವೇರಿಸಿದನು. ಅನೇಕ ಜನರು ಈ ಅದ್ಭುತಕಾರ್ಯಗಳಿಂದ ಸ್ವಸ್ಥತೆಯನ್ನು ಹೊಂದಿದರು. ವಿರೋಧಿಸುವವರು, ಇಷ್ಟಪಡದವರು, ಕುತಂತ್ರಿಗಳೂ, ಇವು ನಡೆದವು ಎಂದು ಒಪ್ಪಿಕೊಳ್ಳಬಹುವಂತದೇ. ವೇಷಧಾರಿಗಳಾದ ಮತ ನಾಯಕರು ಮಾತ್ರ ಅವರ ಅಧಿಕಾರ ಮತ್ತು ಪ್ರತಿಷ್ಠೆಗೋಸ್ಕರ ಆತನನ್ನು ತಿರಸ್ಕರಿಸಿದರು. ಈ ರೀತಿ ಮಾಡುವುದಕ್ಕೆ ಅವರು ಪ್ರಜೆಗಳಲ್ಲಿ ಅವರನ್ನು ಹೆಚ್ಚಿಸುವ ಸ್ವಂತ ಆಲೋಚನೆಗಳೂ, ನಿಯಮಗಳೂ ಮತ್ತು ಆಚಾರಗಳನ್ನು ಸಹ ಅತಿಕ್ರಮಿಸಿದರು. ಆತನ ಶಿಷ್ಯರು ಆತನ ಸಂದೇಶವನ್ನು ಕೇಳಿದರು ಆತನ ಸಾಮ್ಯಗಳು ಇತರೆ ವಿಷಯಗಳು ಮತ್ತು ಆತನ ಅದ್ಭುತಕಾರ್ಯಗಳಿಗೆ ಸಾಕ್ಷಿ ಹೇಳಿದರು. ಧರ್ಮಅಧಿಕಾರಿಗಳು ವಿರೋಧಿಸಿದ ವಿಷಯಗಳು ಅಂದರೆ ಮರಣದಿಂದ ಎಬ್ಬಿಸಿದವರನ್ನು ಕುರಿತು ಮತ್ತು ಕಣ್ಣಿಲ್ಲದವರು ನೋಡುವಂತೆಯೂ ಕಿವುಡರು ಕೇಳುವಂತೆಯೂ ಸಾಕ್ಷಿ ಹೇಳಿದರು ನಾನು ನಿಮಗೆ ಹೇಳಬೇಕಾದದ್ದು ಬಹಳ ಇನ್ನೂ ಬಹಳ ಉಂಟು; ಆದರೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು.ಆತನು ತನ್ನಷ್ಟಕ್ಕೆ ತಾನೆ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆ ಪಡಿಸುವನು"(ಯೋಹಾನ16:12–14).

ಆತನು ಪ್ರಾರ್ಥಿಸಿದಂತೆ ತನ ಪರಿಪೂರ್ಣ ಬಲಿಯಾಗಗೋಸ್ಕರ ಸಿದ್ಧವಾಗುತ್ತಾನೆ "ನಾನು ನಿನ್ನ ವಾಕ್ಯವನ್ನು ಅವರಿಗೆ ಕೊಟ್ಟಿದ್ದೇನೆ; ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ; ಆದಕಾರಣ ಲೋಕವು ಇವರ ಮೇಲೆ ದ್ವೇಷಮಾಡಿ ಅದೆ. ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವುದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ. ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಟೆಪಡಿಸು; ನಿನ್ನ ವಾಕ್ಯವೇ ಸತ್ಯವು. ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನು ಇವರನ್ನು ಲೋಕಕ್ಕೆ ಕಳುಹಿಸಿ ಕೊಟ್ಟೆನು. ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಟೆಮಾಡಿಕೊಳ್ಳುತ್ತೇನೆ"(ಯೋಹಾನ17:14–19).

ಸಮಧಾನ ಪಡಿಸುವುದು, ಬಿಡುಗಡೆ ಮತ್ತು ಪಾಪಗಳಿಗೆ ಕ್ಷಮಾಪಣೆಯನ್ನುಕುರಿತು ದೇವರ ಸಂದೇಶವನ್ನು ಕೊಡುವ ಆತನ ಕೆಲಸ ಸುಮಾರು ಕೊನೆಯ ಹಂತಕ್ಕೆ ಬಂದಿದೆ. ಆದ್ದರಿಂದ ತಕ್ಕ ಸಮಯದಲ್ಲಿ ಯೇಸು ಪರಿಪೂರ್ಣ ಬಲಿಯಾಗಿ ಮನುಷ್ಯರ ಪಾಪಗಳಿಗೋಸ್ಕರ ತನ್ನ ಜೀವಿತವನ್ನು ಅರ್ಪಿಸುವುದಗೋಸ್ಕರ ಆತನು ಪರಲೋಕವನ್ನು ಬಿಟ್ಟು ಭೂಲೋಕ್ಕೆ ಬಂದನು. "ತರುವಾಯ–ಆತನು ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ ಇದೆಲ್ಲಾ ನಿಮಗೆ ತಿಳಿಸಲಿಲ್ಲವೆ? ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವದೆಲ್ಲಾ ನೆರವೇರುವುದು ಅಗತ್ಯವೆಂದು ನಿಮಗೆ ಹೇಳಲಿಲ್ಲವೇ ಅಂದನು. ಆ ಮೇಲೆ ಅವರು ಶಾಸ್ತ್ರವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದು ಅವರಿಗೆ–ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದು ಬರುವನೆಂತಲೂ ಪಾಪ ಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿ ಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವುದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೆ ಸಾಕ್ಷಿಹೇಳುವವರಾಗಿದ್ದೀರಿ. ಇಗೊ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ.ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊಂದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು"(ಲೂಕ24:44–49).

"ಆಗ ಯೇಸು ಹತ್ತರಕ್ಕೆ ಬಂದು–ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ.ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿದ್ದನ್ನೇಲ್ಲ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು"(ಮತ್ತಾಯ28:18–20). ಆದಾಮನ ಪಾಪದ ನಂತರ ಮೊದಲ ಸಾರಿ

ಮನುಷ್ಯರ ಪಾಪಕ್ಕೆ ಬಿಡುಗಡೆ ಹೊಂದಿ ದೇವರೊಂದಿಗೆ ಸಮಾಧಾನ ಪಡುವುದಕ್ಕೆ ಈಗ ಮಾರ್ಗವಾಯಿತು.

ಪ್ರಶ್ನೆಗಳು:

1.ಯೇಸು ಕ್ರಿಸ್ತನು ಯಾವ ಸಮಯದಲ್ಲಿ ಭೂಲೋಕಕ್ಕೆ ಬಂದನು.

a.ಡಿಸೆಂಬರ್ 25 ಅಂದರೆ ಕ್ರಿಸ್‌ಮಸ್ ದಿನದಂದು

b.ಕಾಲವು ಪರಿಪೂರ್ಣವಾದ ಮೇಲೆ ಅಥವಾ ತಕ್ಕ ಸಮಯದಲ್ಲಿ

c.ನಮಗೆ ಗೊತ್ತಿಲ್ಲ

2.ಗಬ್ರಿಯೇಲ ದೂತ ಕಂಡ ನಂತರ ಮರಿಯಳು ಸಂತೋಷಪಟ್ಟು ದೇವರ ಕೆಲಸಗೋಸ್ಕರ ಸಿದ್ಧವಾದಳು ಆದರೆ ಜನರು ಏನು ಅಂದು ಕೊಳ್ಳುತ್ತಾರೊ ಎಂದು ಯೋಸೇಫ ಭಯಪಟ್ಟು ಬಿಟ್ಟು ಬಿಡಬೇಕೆಂದುಕೊಂಡನು. ಮಾಡಿದ ವಾಗ್ದಾನವನ್ನು ಹೇಗೆ ನೆರವೇರಿಸಿದರೆಂದು ಹೊಸ ಒಡಂಬಡಿಕೆಯ ಗ್ರಂಥ ರಚನಾಕಾರರಲ್ಲಿ ಕೆಲವು ಮಂದಿ ಯೇಸು ಕ್ರಿಸ್ತನ ವಂಶಾವಳಿಯನ್ನು ಕರಿತು ಬರೆದಿದ್ದಾರೆ

a.ಸರಿ b.ತಪ್ಪು

4.ಯೇಸು ಕ್ರಿಸ್ತನ ಅಂದರೆ ದೇವರ ಮಗನೆಂದು ತಿಳಿಸುವುದಕ್ಕೆ ಯಾವ ರೀತಿಯಾದ ಆಧಾರಗಳನ್ನು ಕೊಡಲಾಗಿದೆ.

a.ಅದ್ಭುತಗಳು

b.ಯೋಹನನ ಸಾಕ್ಷಿಗಳು

c.ದೇವರ ಸಂಕಲ್ಪ

d.ಮೇಲಿನ ಎಲ್ಲಾವು

5.ಭೂಲೋಕದಲ್ಲಿರುವಾಗ ಯೇಸು ಬೋಧಿಸಿದ ಬೋಧನೆ ಯಾವುದು

a.ವಿಮೋಚನಾ ಪತಕ

**b.ದೇವರೊಂದಿಗೆ ಕ್ಷಮಾಪಣೆ**

**c.ದೇವರೊಂದಿಗೆ ಸಮಧಾನ ಹೊಂದುವುದು**

**d.ಮೇಲಿನ ಎಲ್ಲಾವು**

***

**ಪಾಠ–12**

**ಕ್ರಿಸ್ತನನ್ನು ಕುರಿತಾದ ಸಾಕ್ಷಿಗಳು**

ಜನರು ಯೇಸುವನ್ನು ಮೆಸ್ಸಿಯನೆಂದು, ಕ್ರಿಸ್ತನೆಂದು, ದೇವರ ಮಗನೆಂದು ಗುರ್ತಿಸುವುದೇ ಆತನ ಭೂಲೋಕದ ಸೇವೆಯ ಮುಖ್ಯ ಉದ್ದೇಶ ಅದನ್ನು ಕೆಲವರ ಸಾಕ್ಷಿಗಳ ಮೂಲಕ ನಮಗೆ ತಿಳಿಯಪಡಿಸಿದನು.

**1.ಸ್ಥಾನಿಕನಾದ ಯೋಹಾನ:**

ಯೋಹಾನನು ಪಾಪಕ್ಷಮಾಪಣೆ ಕುರಿತಾದ ದೀಕ್ಷಾ ಸ್ನಾನ(**Baptizo** ಎನ್ನುವ ಗ್ರೀಕ್ ಪದದ ಅರ್ಥ ಮುಳುಗಿಸುವುದು)ವು ಯೆಹೂದ್ಯರಿಗೆ ಪ್ರಕಟಿಸುತ್ತಿದ್ದನು ಮತ್ತು ಯೆಹೂದ್ಯರು ಪಾಪ ಕ್ಷಮಾಪಣೆಗೋಸ್ಕರ ದೀಕ್ಷಾಸ್ನಾನ ಹೊಂದಿದರು "ಬಂದಿದ್ದವರು ಫರಿಸಾಯರ ಕಡೆಯವರಾಗಿದ್ದು–ನೀನು ಕ್ರಿಸ್ತನೂ ಎಲೀಯನೂ ಆ ಪ್ರವಾದಿಯೂ ಅಲ್ಲವಾದರೆ ಸ್ನಾನ ಮಾಡಿಸುವುದೇನು ಎಂದು ಅವನನ್ನು ಕೇಳಿದರು. ಅದಕ್ಕೆ ಯೋಹಾನನು–ನಾನು ನೀರಿನಿಂದ ದೀಕ್ಷಾಸ್ನಾನಡಿಸುವವನು; ಆದರೆ ನನ್ನ ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; ಆತನೇ ನನ್ನ ಹಿಂದೆ ಬರತಕ್ಕವನು; ಆತನ ಕೆರದ ಬಾರನ್ನು ಬಿಚ್ಚುವುದಕ್ಕೂ ನಾನು ಯೋಗ್ಯನಲ್ಲ ಅಂದನು"(ಯೋಹಾನ1:24–27).

"ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ–ಇಗೋ[ಯಜ್ಞಕ್ಕೆ] ದೇವರು ನೇಮಿಸಿದ ಕುರಿ, ಲೋಕ ಪಾಪವನ್ನು ನಿವಾರಣೆ ಮಾಡುವವನು. ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದ್ದದರಿಂದ ನನಗೆ ಮುಂದಿನವನಾದನು ಎಂದು ನಾನು ಹೇಳಿದ ಮಾತು ಈತನ ವಿಷಯವಾಗಿಯೇ. ನನಗೂ ಆತನ ಗುರುತಿರಲಿಲ್ಲ; ಆದರೆ ಆತನನ್ನು ಇಸ್ರಾಯೇಲ್ಯರಿಗೆ ತಿಳಿಯಪಡಿಸುವುದಕ್ಕೋಸ್ಕರವೇ ನಾನು ನೀರಿನ ಸ್ನಾನವನ್ನು ಮಾಡಿಸುವವನಾಗಿ ಬಂದೆನು ಅಂದನು. ಇದಲ್ಲದೆ ಯೋಹಾನನು ಸಾಕ್ಷಿ ಕೊಟ್ಟು ಹೇಳಿದ್ದೇನೆಂದರೆ– ದೇವರಾತ್ಮವು ಪಾರಿವಾಳದಂತೆ ಆಕಾಶದಿಂದ ಇಳಿಯುವುದನ್ನು ನೋಡುದೆನು. ಅದು ಆತನ ಮೇಲೆ ನೆಲೆಗೊಂಡಿತು. ನನಗೂ ಅತನ ಗುರುತಿರಲಿಲ್ಲ; ಆದರೆ ನೀರಿನ ಸ್ನಾನ ಮಾಡಿಸುವುದಕ್ಕೆ ನನ್ನನ್ನು ಕಳುಹಿಸಿದಾತನು–ಯಾವನ ಮೇಲೆ ಆತ್ಮವು ಇಳಿದು ಬಂದು ಇರುವುದನ್ನು ನೀನು ನೋಡುವೆಯೋ ಆತನೇ ಪವಿತ್ರಾತ್ಮದ ಸ್ನಾನವನ್ನು ಕೊಡುವವನು ಎಂದು ತಾನೇ ನನಗೆ ಹೇಳಿದನು. ನಾನು ಅದನ್ನು ನೋಡಿ ಈತನೇ ದೇವಕುಮಾರನೆಂದು ಸಾಕ್ಷಿ ಕೊಟ್ಟಿದ್ದೇನೆ ಅಂದನು"(ಯೋಹಾನ1:29–34).

"ಆ ಕಾಲದಲ್ಲಿ ಯೆಸು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೊರ್ದನ್ ಹೊಳೆಗೆ ಬಂದನು. ಆಗ ಯೋಹಾನನು–ನಾನು ನಿನ್ನಿಂದ ಸ್ನಾನ ಮಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವುದೇನು ಎಂದು ಹೇಳಿ ಆತನನ್ನು ತಡೆಯುತ್ತಾ ಇದ್ದನು. ಆದರೆ ಯೆಸು ಅವನಿಗೆ–ಸದ್ಯಕ್ಕೆ ಒಪಿಕೋ; ಹೀಗೆ ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡನು"(ಮತ್ತಾಯ3:13–15).

**2.ಪವಿತ್ರಾತ್ಮನ ದೀಕ್ಷಾಸ್ನಾನ:**

ಪವಿತ್ರಾ ತ್ಮನು ಕ್ರಿಸ್ತನನ್ನು ಕುರಿತು ಈ ಕಾರ್ಯಗಳ ವಿಷಯವಾಗಿ ಸಾಕ್ಷಿ ಹೇಳಿದನು.

"ಯೇಸು ಸ್ನಾನ ಮಾಡಿಸಿಕೊಂಡ ಕೊಡಲ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವುದನ್ನು ಕಂಡನು"(ಮತಾಯ3:16).

**3.ದೇವರು(ತಂದೆ):**

"ಆಗ– ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು"(ಮತ್ತಯ3:17) ಎಂದು ತಂದೆ ಪರಲೋಕದಿಂದ ಸಾಕ್ಷಿ ಹೇಳಿದನು. ಯೇಸು ತನ್ನ ಸೇವೆಯನ್ನು ಪ್ರಾರಂಭಿಸುವುದಕ್ಕಿಂತ ಮುಂಚೆ 40 ವರ್ಷ ಉಪವಾಸವಿದ್ದನು ಕೊನೆಗೆ ಆತನು ಶರೀರ ಬಲಹೀನತೆಯಲ್ಲಿದ್ದಾಗ ಸೈತಾನನು ಕ್ರಿಸ್ತನನ್ನು ಶೋಧನೆಯನ್ನು ಉಂಟುಮಡಿದನು. ಸೈತಾನನು ಇದರಲ್ಲಿ ಸೋತರೂ ಅವಕಾಶಗಳಿಗೋಸ್ಕರ ಕಾಯುತ್ತಿದ್ದನು. ಕ್ರಿಸ್ತನು ತನ್ನ ಸೇವೆಯನ್ನು ಪ್ರಾರಂಭಿಸಿದನು ಮೊದಲನೇಯದಾಗಿ 12ಜನ ಶಿಷ್ಯರನ್ನು ಆಯ್ಕೆ ಮಾಡಿಕೊಂಡನು ಜನರ ಮಧ್ಯದಲ್ಲಿ ಆತನು ಮಾಡುವ ಕಾರ್ಯಗಳು ಮತ್ತು ಆತನು ಬೋಧಿಸುವ ಸಂಗತಿಗಳಿಗೆ ಸಾಕ್ಷಿಯಾಗಿ ಅವರು ಇರುವಂತೆ ಆಯ್ಕೆ ಮಾಡಿಕೊಂಡನು. ದೇವರು ಆತನೊಂದಿಗೆ ಸಹಾಯಕನಾಗಿದ್ದಾನೆ ಎಂದು ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು.

**4.ಮಹತ್ಕಾರ್ಯಗಳು. ಸೂಚಕ ಕಾರ್ಯಗಳು, ಮತ್ತು ಅದ್ಭುತಕಾಯಗಳು:**

ಆತನು ಧರ್ಮಾಶಾಸ್ತ್ರದಲ್ಲಿಯೂ ಪ್ರವಾದಿಗಳಿಂದಲೂ ತರಬೇತಿ ಹೊಂದಲಿಲ್ಲ. ಆದರೂ ಕಲಿತುಕೊಂಡವರಾದ ರಬ್ಬಿಗಳು, ಶಾಸ್ತ್ರಿಗಳು, ಫರಿಸಾಯರು, ಸದ್ದುಕಾಯರು, ಧರ್ಮ ಅಧಿಕಾರಿಗಳು ಇವರು ಮಾಡಿದಂತೆ ಮಾಡದೆ ಅಧಿಕಾರವುಳ್ಳವನಾಗಿ ಯೇಸು ಬೋಧಿಸಿದನು ತನ್ನ ಬೋಧನೆಯಲ್ಲಿ ಇವರನ್ನೆಲ್ಲಾ ಉದ್ದೇಶಿಸಿ 'ವೇಷಧಾರಿಗಳು ಅವರ ಮನಸ್ಸು, ಹೃದಯ ಮತ್ತು ನಡವಳಿಕೆ ಕುರುಡಾಗಿದೆ' ಎಂದು ಅವರು 'ಅಹಂಕಾರದಲ್ಲಿ ಅವಿವೇಕಿಗಳಾಗಿ ದ್ವೇಷ ಉಳ್ಳವರಾಗಿದ್ದಾರೆಂದು ಮತ್ತು ಸಮಾಜದಲ್ಲಿ ಅವರಿಗೆ ಸ್ಥಾನಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ' ಎಂದು ಅವರನ್ನು ಕುರಿತು ಮಾತಾಡಿದನು ಕ್ರಿಸ್ತನು ಮಾಡಿದ ಅದ್ಭುತ ಕಾರ್ಯಗಳನ್ನು ನೋಡಿ ದೇವರನ್ನು ಕೊಂಡಡುವುದನ್ನು ಬಿಟ್ಟು ದೆವ್ವಗಳು ಎಂದು ಹೇಳಿದರು.

ಮತ್ತಾಯನು ಬರೆದ ಸುವಾರ್ತೆ23 ಅಧ್ಯಾಯದಲ್ಲಿ ಇವರನ್ನು ಕುರಿತು ಹೀಗೆ ಹೇಳಲಾಗಿದೆ.

3ವ "ಅವರು ಹೇಳುತ್ತಾರೆ ಹೊರತು ನಡೆಯುವುದಿಲ್ಲ".

5ವ "ಅವರು ತಮ್ಮ ಕೆಲಸಗಳನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ".

6ವ “ಔತಣ ಪ್ರಸ್ತಗಳಲ್ಲಿ ಪ್ರಥಮ ಸ್ಥಾನ, ಸಭಾಮಂದಿರಗಳಲ್ಲಿ ಮುಖ್ಯಪೀಠಗಳು, ಅಂಗಡೀ ಬೀದಿಗಳಲ್ಲಿ ನಮಸ್ಕಾರಗಳು, ಜನರಿಂದ ಬೋಧಕರೆನಿಸಿಕೊಳ್ಳುವುದು”.

13ವ “ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ”.

16ವ “ಅಯ್ಯೋ, ದಾರಿ ತೋರಿಸುವ ತುರುಡರೇ”.

33ವ “ಹಾವುಗಳೇ, ಸರ್ಪಜಾತಿಯವರೇ, ನರಕ ದಂಡನೆಗೆ ಹೇಗೆ ತಪ್ಪಿಸಿಕೊಂಡಿರಿ?”.

ಅವರು ಆತನಲ್ಲಿ ತಪ್ಪುಗಳನ್ನು ಕಂಡುಕೊಂಡು ಆತನನ್ನು ವಿಮರ್ಶಿಸಿಸುವುದಕ್ಕೆ ಅನೇಕ ಸಾರಿ ಪ್ರಯತ್ನಿಸಿದರು ಆದರೆ ಅವರು ಸೋತು ಹೋದರು. ಆತನ ಅಧಿಕಾರವನ್ನು ಕುರಿತು ಸವಾಲು ಮಾಡಿದರು ಆದರೂ ಗೆಲ್ಲಲಾಗಲಿಲ್ಲ ಲೂಕ 23ನೇ ಅದ್ಯಾಯ ಓದಿ.

5.ಶಿಲುಬೆಗೆ ಹಾಕುವುದು:

ಆತನು ದೇವರ ಮಗನಾದ ಕ್ರಿಸ್ತನು ಎಂದು ಶಿಲುಬೆ ಕಾರ್ಯವು ನಡೆಯುವ ಸಂದರ್ಭದಲ್ಲಿ ನಡೆದ ಸಂಗತಿಗಳಿಂದ ತಿಳಿಯಪಡಿಸಲಾಯಿತು.

“ಯೇಸು ತಿರಿಗಿ ಮಹಾ ಧ್ವನಿಯಿಂದ ಕೂಗಿ ಪ್ರಾಣ ಬಿಟ್ಟನು. ಆಗ ದೇವಾಯದ ತೆರೆಯು ಮೇಲಿಂದ ಕೆಳಗಿನವಗೂ ಹರಿದು ಎರಡು ಭಾಗವಯಿತು; ಭೂಮಿಯು ಅದರಿತು; ಬಂಡೆಗಳು ಸೀಳಿಹೋದವು; ಸಮಾಧಿಗಳು ತೆರೆದವು; ನಿದ್ದೆಹೋಗಿದ್ದ ಅನೇಕ ಭಕ್ತರ ದೇಹಗಳು ಎದ್ದವು”(ಮತ್ತಾಯ:27:50–53).

6.ರೋಮ ಸೈನಿಕರು:

“ಶತಾಧಿಪತಿಯು ಮತ್ತು ಅವನ ಸಂಗಡ ಯೇಸುವನ್ನು ಕಾಯುತ್ತಿದ್ದವರು ಭೂಕಂಪವನ್ನೂ ನಡೆದ ಸಂಗತಿಗಳನ್ನೂ ನೋಡಿ ಬಹಳ ಹೆದರಿಕೊಂಡು–ನಿಜವಾಗಿ ಈತನು ದೇವ ಕುಮಾರನಾಗಿದ್ದನು ಅಂದರು”(ಮತ್ತಾಯ27:54).

7.ಆತನ ಹತ್ತಿರದವರಾದ ಅಪೊಸ್ತಲರು:

ಅಪೊಸ್ತರು ಕ್ರಿಸ್ತನನ್ನು ಕುರಿತು ಹೀಗೆ ಹೇಳಿದರು

“ಆದ್ದರಿಂದ ಕರ್ತನಾದ ಯೇಸು ನಮ್ಮಲ್ಲಿ ಬರುತ್ತ ಹೋಗುತ್ತಾ ಇದ್ದಕಾಲವೆಲ್ಲಾ ಅಂದರೆ ಯೋಹಾನನು ದೀಕ್ಷಸ್ನಾನ ಮಾಡಿಸಿದ್ದು ಮೊದಲಗೊಂಡು ಯೇಸು ನಮ್ಮ ಬಳಿಯಿಂದ ಮೇಲಣ ಲೋಕವನ್ನೇರಿದ ದಿನದವರೆಗೂ ನಮ್ಮ ಜೊತೆಯಲಿದ್ದವರೊಳಗೆ ಒಬ್ಬನು ನಮ್ಮೊಂದಿಗೆ ಆತನ ಪುನರುತ್ಥಾನದ ಸಾಕ್ಷಿ ಹೇಳುವವನಾಗಬೇಕು ಎಂದು ಅಂದನು”(ಅ.ಕೃ1:21–22).

“ನಾವು ನಿಮಗೆ ಪ್ರಸಿದ್ಧಿ ಪಡಿಸುವ ಜೀವ ವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರೆ ಕೇಳಿ ಕಣ್ಣಾರೆ ಕಂಡು ಮನಸ್ಸಿಟ್ಟು ನೋಡಿ ಕೈಇಂದ ಮುಟ್ಟಿದ್ದೇವೆ. ಆ ಜೀವವು ಪ್ರತ್ಯಕ್ಷವಾಯಿತು; ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂಥ ಆ ನಿತ್ಯಜೀವವನ್ನು ನಾವು ಕಂಡು ಆತನನ್ನು ಕುರಿತು ಸಾಕ್ಷಿ ಹೇಳಿ ಅದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ”(1ಯೋಹಾನ1:1–3).

ಪ್ರಶ್ನೆಗಳು:

1.ಯೇಸು ದೀಕ್ಷಾಸ್ನಾನ ಹೊಂದಿದ ನಂತರ ನೀರಿನಿಂದ ಮೇಲಕ್ಕೆ ಬಂದನು. ಆಗ ಆಕಾಶವಾಣಿಯಾಯಿತು ಇಗೋ ಈತನು ನನ್ನ ಪ್ರಿಯ ಮಗನು ಈತನ ಮಾತನ್ನು ಕೇಳಿರಿ ಈತನನ್ನು ಮೆಚ್ಚಿದ್ದೇನೆ ಹೇಳಿದನು.

a.ಸರಿ b.ತಪ್ಪು

2.ಯೇಸು ಅಧಿಕಾರ ಉಳ್ಳವನಾಗಿ ಬೋಧಿಸಿದನು ಯಾಕೆಂದರೆ ಅತನು ಇತರಂತೆ ರಬ್ಬಿಗಳಿಂದ ಯೆಹೂದ್ಯರ ಪಾಠ ಶಾಲೆಗಳಲ್ಲಿ ಕಲಿತನು.

a.ಸರಿ b.ತಪ್ಪು

3.ಫರಿಸಾಯರು ಮತ್ತು ಸದ್ದುಕಾಯರನ್ನು ಕುರಿತು ಏನು ಹೇಳಿದನು

a.ಕುರುಡರಿಗೆ ದಾರಿ ತೋರಿಸುವವರು

b.ವೇಷಧಾರಿಗಳು

c.ಒಳ್ಳೆಯವರು

d.a ಮತ್ತು b

**4.ಯೇಸುವಿನ ಶಿಷ್ಯರಾದವರು ಕ್ರಿಸ್ತನು ಮಾಡಿದ ಆದ್ಭುತ ಕಾರ್ಯಗಳನ್ನು ಕುರಿತು ಅತನ ಮರಣ ಸಮಾಧಿ ಪುನರುತ್ಥಾನವನ್ನು ಕುರಿತು ಸಾಕ್ಷಿ ಹೇಳಿದರು**

**a.**ಸರಿ **b.**ತಪ್ಪು

**5.ಯೇಸುವನ್ನು ಕುರಿತು ಸಾಕ್ಷಿ ಹೇಳಿದವರು**

**a.**ಸ್ನಾನಿಕನಾದ ಯೋಹಾನನು.

**b.**ಪವಿತ್ರಾತ್ಮನು

**c.**ದೇವರು(ತಂದೆ)

**d.**ಮೇಲಿನ ಎಲ್ಲವೂ

***

**ಪಾಠ–13**

## ಸೇವೆ ಪ್ರಾರಂಭ

ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ; ಆತನಲ್ಲಿ ಜೀವವಿತ್ತು ಆ ಜೀವವು ಮನುಷ್ಯರಿಗೆ ಬೆಳಕಾಗಿತ್ತು"(ಯೋಹಾನ1:1–4).

ಕರ್ತನಾದ ದೇವರು, ತಂದೆಯಾದ ದೇವರೊಂದಿಗೆ ಮತ್ತು ಪವಿತ್ರಾತ್ಮನಾದ ದೇವರೊಂದಿಗೆ ಪರಲೋಕದಲ್ಲಿ ಇರುವ ಮಹಿಮೈಶ್ವರ್ಯವನ್ನು ಬಿಟ್ಟು ಮನುಷ್ಯರ ಪಾಪಗಳ ನಿಮಿತ್ತ ಭೂಲೋಕಕ್ಕೆ ಬಂದು ನಿರ್ದೋಷಿಯಾಗಿ, ಬಲಿಯನ್ನಾಗಿ ಸಮರ್ಪಿಸಿಕೊಂಡನು.

ಮನುಷ್ಯರು ದೇವರೊಂದಿಗೆ ಸಮಾಧಾನ ಹೊಂದುವುದಕ್ಕೆ ಒಂದು ಪರಿಶುದ್ಧವಾದ ಬಲಿ ಅವಶ್ಯಕವಾಗಿದೆ. ಆತನು ಬೆತ್ಲೆಹೇಮಿಗೆ ಹೋಗುವುದು ಐಗುಪ್ತಕ್ಕೆ ಓಡಿಹೋಗುವುದು ಮತ್ತು ದೇವರ ದಯೆಯಲ್ಲಿ, ಮನುಷ್ಯರ ದಯೆಯಲ್ಲಿಯೂ ಬೆಳೆಯುವುದು, ನಜರೇತಿನವರು ಆತನನ್ನು ಬಡಿಗೆ ಕೆಲಸದ ಯೋಸೇಫನ ಮಗನೆಂದು ಕರೆಯಲಾಯಿತು.

12ವರ್ಷದಲ್ಲಿ ಯೆರೂಸಲೇಮಿನಲ್ಲಿ ಇರುವುದಕ್ಕೆ ನಿರ್ಣಯಿಸಿಕೊಂಡರು ಮತ್ತು ದೇವಾಲಯದಲ್ಲಿ ಬೋಧಕರ ಬೋಧನೆಯನ್ನು ಕೇಳುತ್ತಾ ಅನೇಕ ಪ್ರಶ್ನೆಗಳನ್ನು ಕೇಳುತ್ತಾ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದನು. 20ವರ್ಷಗಳ ನಂತರ ಆತನ ಮರಣವನ್ನು ಕುರಿತು ಸಂಚುಮಾಡಿದ ನಾಯಕರು ಬಹುಶ ಇವರಲ್ಲಿ ಇರಬಹುದು.

ಯೆರೂಸಲೇಮನಲ್ಲಿ ಇರುವುದಕ್ಕೆ ಯೊಸೇಫ ಮತ್ತು ಮರಿಯಳು ಯೇಸುವನ್ನು ಪ್ರಶ್ನಿಸಿದಾಗ ಹೀಗೆ ಹೇಳಿದನು "ಆತನು ಅವರಿಗೆ–ನೀವು ನನ್ನನ್ನು ಹುಡುಕಿದ್ದೇನು? ನಾನು ನನ್ನ ತಂದೆಯ ಮನೆಯಲ್ಲಿ ಇರಬೇಕಾದದ್ದು ನಿಮಗೆ ತಿಳಿಯಲಿಲ್ಲವೆ? ಎಂದು ಉತ್ತರ ಕೊಟ್ಟನು"(ಲೂಕ2:49).

"ಬಳಿಕ ಆತನು ಅವರ ಜೊತೆಯಲ್ಲಿ ನಜರೇತಿಗೆ ಬಂದು ಅವರಿಗೆ ಅಧೀನನಾಗಿದ್ದನು. ಆತನ ತಾಯಿಯೂ ಈ ಸಂಗತಿಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಳು. ಯೇಸು ಜ್ಞಾನದಲ್ಲಿಯೂ ದೇಹದಲ್ಲಿಯೂ ವೃದ್ಧಿಯಾಗುತ್ತಾ ಬಂದನು; ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು"(ಲೂಕ2:51–52).

ಆತನು ಪರಲೋಕವನ್ನು ಬಿಟ್ಟು ಮತ್ತು ವಾಕ್ಯರೂಪದಿಂದ ಶರೀರಧಾರಿಯಾಗಿ ಭೂಲೋಕ್ಕೆ ಬಂದ ಉದ್ದೇಶವು ನೆರವೇರಿಸುವುದಕ್ಕೆ 30ವರ್ಷವಯಸ್ಸಿನಲ್ಲಿ ತನ್ನ ಸೇವೆಯನ್ನು ಪ್ರಾರಂಭಿಸಿದನು

ಯೋಹಾನನು ಮಾರು ಮನಸ್ಸು ನಿಮಿತ್ತ ದೀಕ್ಷಾ ಸ್ನಾನ ಕೊಡುತ್ತಿರುವಾಗ ಯೇಸು ಆತನ ಹತ್ತಿರಕ್ಕೆ ಬಂದು ಆತಗೆ ದೀಕ್ಷಾಸ್ನಾನ ಕೊಡುವುದಕ್ಕೆ ಇಷ್ಟಪಡಲಿಲ್ಲ ಅದಕ್ಕೆ ಯೇಸು ಆದರೆ ಯೇಸು ಅವನಿಗೆ–ಸದ್ಯಕ್ಕೆ ಒಪಿಕೋ; ಹೀಗೆ ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು ಹೇಳಿದಾಗ ಅವನು ಒಪ್ಪಿಕೊಂಡು ಆತನಿಗೆ ದೀಕ್ಷಾಸ್ನಾನ ಕೊಟ್ಟನು.

ಯೇಸುವಿನ ದೀಕ್ಷಾ ಸ್ನಾನಕ್ಕಿಂತ ಮುಂಚೆ ಯೋಹಾನನು ಹೇಳಿದ ಸಂಗತಿಗಳನ್ನು ಯೇಸುವಿನ ದೀಕ್ಷಾ ಸ್ನಾನದಲ್ಲಿ ಕಂಡುಕೊಂಡನು. ಯೇಸು 40 ದಿನ ಉಪವಾಸವಿರುವುದಕ್ಕೆ ಅಡವಿಗೆ ಹೋದನು ಅಲ್ಲಿ ಸೈತಾನನಿಂದ ನಮ್ಮಂತೆ ಕಳಗಿನ ಶೋಧನೆಗಳನ್ನು ಅನುಭವಿಸಿದನು.

1.ಆಹಾರಕ್ಕೋಸ್ಕರ ಹಸಿವುಗೊಂಡನು–ಶರೀರ ಕೋರಿಕೆ

2.ಆಧಿಕಾರವನ್ನು ಕೊರುವುದು–ಬದುಕು ಬಾಳಿನ ಡಂಬ

3.ವಸ್ತುಗಳನ್ನು ಬಯಸುವುದು–ಕಣ್ಣಿನ ಆಸೆ

ಪ್ರತಿ ಶೋಧನೆಯನ್ನು ಆತನು ಬಹಳ ವಿಧೇಯತೆಯಲ್ಲೂ ತಾಳ್ಮೆಯಿಂದಿದ್ದನು ಆದರೆ ಪಾಪ ಮಾಡಲಿಲ್ಲ. ಪ್ರತೀ ಸಮಯದಲ್ಲಿಯೂ ಕ್ರಿಸ್ತನು ಹೇಳಿದ ಮಾತು ತಾನು 'ತನ್ನ ತಂದೆಯ ಕೆಲಸಮಾಡುವುದು ಮತ್ತು ತಂದೆಯ ಚಿತ್ತವನ್ನು ನೆರವೇರಿಸುವುದೇ' ಎಂದು ಹೇಳಿದ ಸಂಗತಿಗಳನ್ನು ನಾವು ಗಮನಿಸಬಹುದು.

ನಾವು ಸಹ ನಮ್ಮ ಆಲೋಚನೆ ಮತ್ತು ನಿರ್ಣಯಗಳನ್ನು 'ದೇವರ ಚಿತ್ತವನ್ನು ಆಧಾರ ಮಾಡಿರುವಂತೆ' ಇರಬೇಕು.

ಪವಿತ್ರಾತ್ಮನ ಮೂಲಕ ನಡೆಸಲ್ಪಟ್ಟ ಅಪೊಸ್ತಲರು ಹೇಳಿದ ಸಂಗತಿಗಳಲ್ಲಿ ನಾವು ಬಹಳ ಜಾಗ್ರತೆಯಾಗಿರಬೇಕು. ಆ ಸಂಗತಿಗಳು ನಮಗೆ ಹೊಸ ಒಡಂಬಡಿಕೆಯಲ್ಲಿ ಬರೆಯಲ್ಪಟ್ಟಿದೆ. ಸುವಾರ್ತೆ ನಮ್ಮನ್ನು ದೇವರೊಂದಿಗೆ ಸಮಾಧಾನ ಪಡಿಸುವ ಸಂದೇಶವನ್ನು ನಮಗೆ ತಿಳಿಸುತ್ತಾ ನಮ್ಮ ಪಾಪಗಳಿಗೆ ಕ್ಷಮಾಪಣೆಯು ಕ್ರಿಸ್ತನಲ್ಲಿ ಕಂಡುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಆತನನ್ನು ಭೂಲೋಕಕ್ಕೆ ಕಳುಹಿಸಿದ ತನ್ನ ತಂದೆಯ ಚಿತ್ತವನ್ನು ನೆರವೇರಿಸುವುದರ ಮೂಲಕ ತನಗೆ(ಕ್ರಿಸ್ತನಿಗೆ) ಎದುರಾದ ಪ್ರತೀ ಶೋಧನೆಗಳನ್ನು ಸುಲಭವಾಗಿ ಜಯಿಸಿದನು.

ನಾವು ದೇವರ ಹೋಲಿಕೆಯಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ ಆದ್ದರಿಂದ ನಮಗೂ ಸಹ ಈ ರೀತಿಯಾದ ಜಯಿಸುವ ಅವಕಾಶವಿದೆ. ಅದು ದೇವರಿಗೆ ಒಳಪಡುವುದರ ಮೂಲಕ ನಮಗೆ ಸಿಗುತ್ತದೆ.

ಪ್ರಶ್ನೆಗಳು:

1.ಯೋಹಾನನ ಪ್ರಕಾರ ಆದಿಯಲ್ಲಿ ತಂದೆಯೊಂದಿಗೆ(ದೇವರು) ಯಾರಾರು ಇದ್ದರು?

a.ವಾಕ್ಯವು

b.ಪವಿತ್ರಾತ್ಮ

c.a ಮತ್ತು b

2.ಕರ್ತನಾದ(ಕ್ರಿಸ್ತನು) ದೇವರು ನಿಷ್ಕಳಂಕ ಬಲಿಯಾಗವಾಗಿ, ದೇವರ ಹೋಲಿಕೆಯಲ್ಲಿ ಉಂಟುಮಾಡಲ್ಪಟ್ಟ ಮನುಷ್ಯರು ದೇವರೊಂದಿಗೆ ಸಮಧಾನ ಪಡುವುದಕ್ಕೆ ಆ ಮನುಷ್ಯರಿಂದ ಮರಣಹೊಂದಲು ಭೂಮಿಗೆ ಬಂದನು.

a.ಸರಿ b.ತಪ್ಪು

3.ಯೋಹಾನನ ಮೂಲಕ ಯೇಸು ಯಾಕೆ ದೀಕ್ಷಾಸ್ನಾನ ಮಾಡಿಸಿಕೊಂಡನು?

a.ಮೋಶೆ ಧರ್ಮಶಾಸ್ತ್ರದಲ್ಲಿ ಏಕೀಬವಿಸಲು

b.ತನ್ನ ಪಾಪಗಳು ಕ್ಷಮಿಸುವುದಕೊಸ್ಕರ

c.ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ ಎಂದು

4.ಯೇಸು ಸೈತಾನನ ಆಸೆಗೆ ಒಳಪಟ್ಟು ಸೈತಾನನ ಶೋಧನೆಗಳಿಗೆ ಒಳಪಡಲಿಲ್ಲ ಯಾಕೆಂದರೆ ಆತನು ಮನುಷ್ಯನಲ್ಲ; ಅಂದರೆ ರಕ್ತ ಮಾಂಸಗಳಲ್ಲ ಆದರೆ ಆತ್ಮ ಸ್ವರೂಪಿಯಾಗಿದ್ದಾನೆ.

a.ಸರಿ b.ತಪ್ಪು

5.ನಮ್ಮ ವಿಶ್ವಾಸವು, ನಿರ್ಣಯಗಳು ದೇವರ ಚಿತ್ತದ ಮೇಲೆ ಆಧಾರವಾಗಿರುವುದಕ್ಕೆ ನಾವು ಸತ್ಯ ವೇದವನ್ನು ಓದಿ ಗ್ರಹಿಸಿಕೊಳ್ಳಬೇಕು

a.ಸರಿ b.ತಪ್ಪು

***

## ಪಾಠ–14

## ಕ್ರಿಸ್ತನು ತಂದೆಯ ಚಿತ್ತವನ್ನು ನೆರವೇರಿಸುವುದು

ಸ್ನಾನಿಕನಾದ ಯೋಹನನು ಯೇಸುವನ್ನು ಕುರಿತು 'ದೇವರು ನೇಮಿಸಿದ ಯಜ್ಞದ ಕುರಿಮರಿ' ಎಂದು ತನ್ನ ಶಿಷ್ಯರಿಗೆ ಹೇಳಿದನು. ಯೇಸು ದೀಕ್ಷಾಸ್ನಾನ ಹೊಂದಿದಾಗ ದೇವರು ಆತನನ್ನು ಕುರಿತು ತನ್ನ ಮಗನೆಂದು ಮತ್ತು ಆತನಲ್ಲಿ ನಾನು ಸಂತೋಷಿಸುತ್ತೇನೆ ಎಂದು ಹೇಳಿದನು.

ಯೇಸು ಯೆಹೂದ್ಯರಿಗೆ ದೇವರ ರಾಜ್ಯವನ್ನುಕುರಿತು ಭೋದಿಸಿದನು. ತನ್ನ ಮಾತಿನ ಮುಖಾಂತರ ಅನೇಕ ಅದ್ಭುತಗಳನ್ನು ಮಾಡಿದನು ಶತ್ರುಗಳನ್ನು ಸಹ ಆ ಸಂಗತಿಗಳನ್ನು ತಿರಸ್ಕರಿಸದೇ ಹೋದರು ಅವು ಜನರ ಮಧ್ಯ ಮಾಡಿದವುಗಳು ಅವುಗಳಲ್ಲಿ ಕೆಲವು ಉದಾಹರಣೆಗಳು: 2ಮೀನು 5ರೊಟ್ಟಿಗಳನ್ನು ಅನೇಕ ಜನರಿಗೆ ಆಹಾರವಾಗಿ ಕೊಟ್ಟ ಕಾರ್ಯ ಮತ್ತು ಒಂದು ಸಮಾಧಿ ಕಾರ್ಯವನ್ನು ಸಹ ನಿಲ್ಲಿಸಿದನು, ಅತನು ಒಬ್ಬ ವಿಧವೆಯ ಮಗಳನ್ನು ತಿರಿಗಿ ಬದುಕಿಸಿದನು, ಕುರುಡನನ್ನು ಮತ್ತು ರೋಗಿಗಳನ್ನು ಸಹ ಸ್ವಸ್ಥತೆ ಮಾಡಿ ಅವರ ಜೀವಿತಗಳನ್ನು ಸರಿಪಡಿಸಿದನು, ಆ ಪಟ್ಟಣದಲ್ಲಿ ಅವರೆಲ್ಲರೂ ಇವುಗಳು ನಡೆಯುವುದನ್ನು ನೋಡಿದರು ಆತನು ಸಮಾಧಿಗಳಿರುವ ತೋಟಕ್ಕೆ ಹೋಗಿ ಆಗಲೇ ಕೊಳೆತು ಹೋಗುತ್ತಿರುವ ಒಂದು ದೇಹವನ್ನು ಸಮಾಧಿಯಿಂದ ಎಬ್ಬಿಸಿದನು. ಆತನ ಮಾತುಗಳು ಮತ್ತು ಅದ್ಭುತಗಳೆಲ್ಲವೂ ಜ್ಞಾನಿಗಳಿಗೆ, ಸಮಾಜದಲ್ಲಿ ದೊಡ್ಡ ನಾಯಕರಿಗೆ ಆತನೇ ದೇವರ ಮಗನು ಎಂದು ಗುರ್ತಿಸುವಂತಾಯಿತು. ಅವರು ಆತನಲ್ಲಿ ನಂಬಿಕೆ, ವಿಶ್ವಾಸವನ್ನುನಿಟ್ಟರು ಆದರೆ ಯೆಹೂದ್ಯರ ನಾಯಕರು ವಿಶ್ವಾಸಿಸಲಿಲ್ಲ ಅವರು ಇನ್ನೂ 'ಸಾಕ್ಷಿಗಳು ಬೇಕು' ಎಂದರು.

ತನ್ನ ಸೇವೆಯ ಸ್ವಲ್ಪಕಾಲದ ನಂತರ ಹಿಡಿದು ಕೊಡುವುದಕ್ಕೆ ಮತ್ತು ಶಿಲುಬೆಗೆ ಹಾಕುವುದನ್ನು ಕುರಿತು ತನ್ನ ಶಿಷ್ಯರಿಗೆ ಪ್ರತ್ಯೇಕವಾಗಿ 12ಮಂದಿ ಶಿಷ್ಯರಿಗೆ ಹೇಳುವುದಕ್ಕೆ ಪ್ರಾರಂಭಿಸಿದನು. ಭೂಲೋಕದಲ್ಲಿ ತನ್ನ ಸೇವೆ ಆರಂಭಿಸಿದ ದಿನದಿಂದ ಸೇವೆಯಲ್ಲಿ ಎಲ್ಲಾ ಕೆಲಸಗಳು ನಡೆಯಬೇಕಾದ ಶಿಲುಬೆಯ ಕಾರ್ಯಕ್ಕೆ ಅನುಗುಣವಾಗಿಯೇ ಸಿದ್ದ ಮಾಡಲಾಗಿದೆ. ಸೈತಾನನ ತಲೆಯನ್ನು ಅವ್ವಳ ಸಂತಾನದಿಂದ ಹೀಗೆ ಜಜ್ಜುವುದು –ಆತನ ಪರಿಪೂರ್ಣ ವಿಧೇಯತೆಯಿಂದ

–ಆತನ ಮರಣವು ಅಂದರೆ ಪಾಪ ಪರಿಹಾರವಾಗಿ ಪರಿಪೂರ್ಣ ಬಲಿಯಾಗ

–ಆತನ ಪುನರುತ್ಥಾನವು ಅಂದರೆ ಮರಣ ಮತ್ತು ಸಮಾಧಿಯನ್ನು ಜಯಿಸಿ ದೇವರೊಂದಿಗೆ ಸಮಾಧಾನಕ್ಕೆ ಮಾರ್ಗ ಏರ್ಪಾಟು ಮಾಡಲಾಗಿದೆ

–ಆತನು ಸಮಾಧಿಯನ್ನು ಜಯಿಸಿ ಪುನರುತ್ಥಾನನಾದನು

ಆತನ ಆಜ್ಞೆಗಳಲ್ಲಿನ ಮತ್ತು ಸಂಕಲ್ಪದಲ್ಲಿನ ಉದ್ದೇಶವನ್ನು ನಾವು ಪೂರ್ತಿಯಾಗಿ ಅರ್ಥಮಾಡಿಕೊಳ್ಳದೆ ಹೊದರೂ ನಮ್ಮಿಂದ ವಿಧೇಯತೆಯನ್ನು ಕೊರುತ್ತಿದ್ದಾನೆ. ಕಾಯಿನನ ಅರ್ಪಣೆಗಿಂತ ಹೇಬೇಲನ ಅರ್ಪಣೆಯನ್ನು ಯಾವುದರಿಂದ ದೇವರು ಸಂತೋಷಿಸಿದನು? ಒಂದು ದೊಡ್ಡ ನಾವೆಯನ್ನು ಯಾಕೆ ಅನೇಕ ವರ್ಷಗಳಕಾಲ ನಿರ್ಮಿಸಬೇಕಾದ ಅವಶ್ಯಕತೆಯಿತ್ತು? ಯಾಕೆ ಮನೆಯ ಬಾಗಿಲಿಗೆ ರಕ್ತವನ್ನು ಹಚ್ಚಿ ಅವರ ಮೊದಲ ಮಕ್ಕಳನ್ನು ಸಂಹರಿಸದಂತೆ ತಪ್ಪಿಸಲಾಯಿತು? ವಿಷಸರ್ಪದಿಂದ ಸತ್ತವರನ್ನು ಬದುಕಿಸಿವುದಕ್ಕೆ ಯಾಕೆ ಹಿತ್ತಾಳೆ ಸರ್ಪವು  ಎತ್ತಬೇಕಾಯಿತು? ಬಹುಃಶ ದೇವರ ಉದ್ದೇಶವೇನೂ? ನಮಗೆ ತಿಳಿಯಬಹುದು ಅಥವಾ ತಿಳಿಯದೆ ಇರಬಹುದು. ಆದರೆ ನಾವು ದೇವರ ಆಜ್ಞೆಗಳಿಗೆ ಒಳಪಡಬೇಕು ದೇವರಲ್ಲಿ ಪೂರ್ಣ ನಂಬಿಕೆಯನ್ನು ಮತ್ತು ವಿಧೇಯತೆಯನ್ನು ಹೊಂದಿ ದೇವರ ಆಜ್ಞೆಗಳಿಗೆ ಒಳಗಾಗಬೇಕು, ಮನುಷ್ಯರ ಪರಿಮಿತವಾದ ಮನಸ್ಸಿಗೆ ಕಷ್ಟವಾಗಿ ಇರುವ, ಅವರು ದೇವರ ಮಾತಿನಲ್ಲಿ ನಂಬಿಕೆಯನ್ನಿಡುವುದಕ್ಕೆ ಸ್ಪಂದಿಸಬೇಕು.

ಆದ್ದರಿಂದ ಆತನು ನಮ್ಮ ಪಾಪಗಳಿಗೋಸ್ಕರ ಪರಿಪೂರ್ಣ ಬಲಿಯಾಗವಾಗಿ ಸಮರ್ಪಿಸಿಕೊಳ್ಳುವುದಕ್ಕೆ ಪೂರ್ಣ ವಿಧೇಯತೆಯಿಂದ ಯೆರೂಸಲೇಮಿಗೆ ಹೋಗುತ್ತಾನೆ. ಯೆಹೂದ್ಯರು ಯೇಸುವನ್ನು ಸಾಯಿಸುವುದಕ್ಕೆ ಆತನ ಮೇಲೆ ಸಂಚು, ದ್ವೇಷಪಟ್ಟು ಅಸ್ಸಯ್ಯಾಪಟ್ಟು ಮತ್ತು ಆತನೊಂದಿಗೆ ಗರ್ವದೊಂದಿಗೆ ನಡೆದುಕೊಳ್ಳುತ್ತಾ, ಆತನನ್ನು ಸಾಯಿಸುವುದಕ್ಕೆ ಸಂಚುಮಾಡುವುದಕ್ಕೆ ಒಬ್ಬನನ್ನು ಕೊಂಡುಕೊಂಡರು ರೋಮಾ ಶತಾಧಿಪತಿ ಆತನನ್ನು ನಿರಪರಾಧಿ  ಎಂದು ತೀರ್ಪುಕೊಟ್ಟನು ಆದರೆ ಯೆಹೂದ್ಯರ ಸಂತೋಷಗೋಸ್ಕರ ಯೇಸುವನ್ನು ಸಾಯಿಸುವುದಕ್ಕೆ ಒಪ್ಪಿಕೊಂಡನು, ಯೇಸು ಇಷ್ಟಪೂರ್ವಕವಾಗಿ ತನ್ನ ಜೀವನ್ನು ಮನುಷ್ಯರ ಪಾಪಗಳಿಗೋಸ್ಕರ ಪರಿಪೂರ್ಣಬಲಿಯಾಗಿ ಸಮರ್ಪಿಸಿಕೊಂಡು ಮನುಷ್ಯರೆಲ್ಲಾರೂ ಆತನಲ್ಲಿ ನಂಬಿಕೆ, ವಿಶ್ವಾಸವನ್ನಿಟ್ಟು ಒಳಪಡುವುದರ ಮೂಲಕ ದೇವರೊಂದಿಗೆ ಅವರನ್ನು ಸಮಧಾನ ಪಡಿಸುವುದಕ್ಕೆ ಮಾರ್ಗವನ್ನು ಸಿದ್ದಮಾಡಿದನು.

ಆದಾಮನಲ್ಲಿನ ಪಾಪದಿಂದ ದೇವರಿಂದ ಪತನವಾದ ಮನುಷ್ಯರು ಅವರು ರಕ್ಷಣೆ ಹೊಂದುವಂತೆ ದೇವರ ಪ್ರಣಾಳಿಕೆ(ಸಂಕಲ್ಪ)ಯನ್ನು  ದೇವರು ಕ್ರಿಸ್ತನಲ್ಲಿ ತನ್ನ ಚಿತ್ತವನ್ನು ಜಗತ್ತು ಬುನಾದಿ ಹಾಕುವುದಕ್ಕಿಂತ ಮುಂಚೆ ನಿರ್ಣಯಿಸಿಕೊಂಡಿದ್ದನು. ಅದನ್ನು ನೆರವೇರಿಸುವುದಕ್ಕೆ ಕ್ರಿಸ್ತನನ್ನು ಲೋಕಕ್ಕೆ ಕಳುಹಿಸಿ ಈ ಲೋಕಕ್ಕೆಲ್ಲಾ ಸಮಾಧಾನ ಸಂದೇಶವನ್ನು(ಸುವಾರ್ತೆ)ತಿಳಿಯಪಡಿಸಿದನು.

“ನಮ್ಮ ಕರ್ತನಾದ  ಯೇಸುಕ್ರಿಸ್ತನ ದೇವರು ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯ ವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ ಹೇಗೆಂದರೆ ನಾವು ಪ್ರೀತಿಯಲ್ಲಿ ನಡೆದು ಆತನ ಸನ್ನಿಧಿಯಲ್ಲಿ ಪರಿಶುದ್ಧರೂ ದೋಷವಿಲ್ಲದವರೂ

ಆಗಿರಬೇಕೆಂದು ನಮ್ಮನ್ನು ಜಗದುತ್ಪತ್ತಿಗೆ ಮುಂಚೆ ಕ್ರಿಸ್ತನಲ್ಲಿ ಆರಿಸಿಕೊಂಡನು. ಆತನು ತನ್ನ ಕೃಪೆಯನ್ನು ಪ್ರಖ್ಯಾತಿಗೆ ತರಬೇಕೆಂದು ನಮ್ಮನು ಯೇಸುಕ್ರಿಸ್ತನ ಮೂಲಕ ತನ್ನ ಪುತ್ರರರನ್ನಾಗಿ ಸ್ವೀಕರಿಸುವುದಕ್ಕೆ ದಯಾಪೂರ್ವಕವಾದ ತನ್ನ ಚಿತ್ತಾನುಸಾರವಾಗಿ ಮೋದಲೇ ಸಂಕಲ್ಪಮಾಡಿದನು"(ಎಫೆಸ1:3–6).

"ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ. ಯಾಕೆಂದರೆ ದೇವರು ತನ್ನ ಮಗನಿಗೆ ಅನೇಕ ಮಂದಿ ಸಹೋದರರಿದ್ದು ಅವರಲ್ಲಿ ಆತನೇ ಹಿರಿಯನಾಗಿರಬೇಕೆಂದು ಉದ್ದೇಶಿಸಿ ತಾನು ಯಾರನ್ನು ತನ್ನವರೆಂದು ಮೊದಲು ತಳಿದುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವುದಕ್ಕೆ ಮೊದಲೇ ನೇಮಿಸಿದನು"(ರೋಮ8:28–29).

"ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕವು ಉಂಟಾಗುವುದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು"(ಯೋಹಾನ17:5).ಅದೇ ಸಮಧಾನ ಸಂದೇಶ.

ಪ್ರಶ್ನೆಗಳು:

1.ಆತನ ಪರಿಪೂರ್ಣತೆಯಲ್ಲಿ ನಾವು ವಿಶ್ವಾಸವನ್ನಿರಿಸಿ ಪೂರ್ತಿಯಾಗಿ ಅರ್ಥಮಾಡಿಕೊಳ್ಳದಿದ್ದರೂ ಆತನಿಗೆ ಒಳಗಾಗುವಂತೆ ದೇವರು ನಮ್ಮಿಂದ ವಿಧೇಯತೆಯನ್ನು ಕೋರುತ್ತಿದ್ದಾನೆ.

a.ಸರಿ b.ತಪ್ಪು

2.ಯೆರೂಸಲೇಮಿಗೆ ತಿರಿಗಿ ಹೋದರೆ ಆತನು ಮರಣಿಸುವನು ಎಂದು ಗೊತ್ತಿದ್ದರೂ ಸಹ ಯೇಸು ಅಲ್ಲಿಗೆ ಹೋದನು ಮತ್ತು ಅದಕ್ಕೋಸ್ಕರ ಆತನು ಬಂದನು.

a.ಸರಿ b.ತಪ್ಪು

3.ಯೇಸು ಕ್ರಿಸ್ತನು ದೇವರ ಮಗನು ಎಂದು ಗುರ್ತಿಸಲು ಯಾವ ಕಾರ್ಯಗಳು ಆತನ ಮೂಲಕ ಮಾಡಲ್ಪಟ್ಟಿವೆ.

a.ಅದ್ಭುತ ಕಾರ್ಯಗಳು

b.ಸ್ನಾನಿಕನಾದ ಯೋಹಾನನ ಸಾಕ್ಷಿಗಳು

c.ತನ್ನನ್ನು ಕುರಿತು ತಾನು ಹೀಳಿದ ಮಾತುಗಳು

d.ಮೇಲಿನ ಎಲ್ಲವೂ

4. ಯೇಸು ತನ್ನ ಸೇವೆಯ ಕೊನೆಯಲ್ಲಿ ಯೆರೂಸಲೇಮಿಗೆ ಹೋಗಲು ಕಾರಣವೇನು?

a.ಪಸ್ಕ ಹಬ್ಬಕೊಸ್ಕರ ಆತನ ಶಿಷ್ಯರು ಕೇಳಿದ್ದರಿಂದ

b.ಪ್ರತಿ ಒಬ್ಬರೂ ಹೋಗಬೇಕು ಎಂದು ರೋಮಾ ಸರ್ಕಾರ ಹೇಳಿದ್ದರಿಂದ

c.ಆತನು ದೇವರ ಮಗನು ಎಂದು ಗುರ್ತಿಸಿಕೊಳ್ಳಲು

d.ಮನುಷ್ಯರಿಗೋಸ್ಕರ ಪರಿಪೂರ್ಣ ಬಲಿಯಾಗವಾಗಿ ಸಮರ್ಪಿಸಿಕೊಳ್ಳುವುದಕ್ಕೆ

5. ಪಿಲಾತನು ರೋಮಾ ಅಧಿಕಾರಿ ಆತನನ್ನು(ಕ್ರಿಸ್ತ)ನು ನಿರಪರಾಧಿ ಎಂದು ಗುರ್ತಿಸಿದರು

a.ಸರಿ b.ತಪ್ಪು

***

## ಪಾಠ–15

## ಸುವಾರ್ತೆ ಸಂದೇಶ

ಪ್ರೀತಿ ದಯೆ ಶಾಂತಿ ಯರ್ಥಾತೆ ಮತ್ತು ಸತ್ಯ ಎನ್ನುವ ದೇವರ ಲಕ್ಷಣಗಳೊಂದಿಗೆ ದೇವರು ಮಾನವನನ್ನು ಸೃಷ್ಟಿಸಿದನು.

ತೋಟವನ್ನು ಕಾಯುವುದಕ್ಕೆ ಮತ್ತು ಒಳ್ಳೆದರ ಕೆಟ್ಟದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದು ಎಂದು ಆತನು  ಆಜ್ಞಾಪಿಸಿದ್ದನು ನಿಜವಾಗಿ ದೇವರ ಸ್ವಭಾವವಾದ ಒಳ್ಳೆತನವನ್ನು ಕುರಿತು ಮನುಷ್ಯನಿಗೆ ಮಾತ್ರಗೊತ್ತು. ಒಳ್ಳೆದು ಎನ್ನುವುದು ಸೈತಾನನ ಲಕ್ಷಣವಲ್ಲ ಮಾನವನು ದೇವರಿಂದ ಆಜ್ಞಾಪಿಸಲಪಟ್ಟವನು ಅದರೆ ಮಾನವನಿಗೆ ಆಲೋಚನೆ ಮಾಡುವುದು, ಕಾರಣ ಕಂಡುಕೊಳ್ಳವ ಸಾಮರ್ಥ್ಯವನ್ನು ಕೊಟ್ಟಿದ್ದಾನೆ ಎಂದು ಗೊತ್ತಗುತ್ತದೆ. ಒಂದು ಸುಳ್ಳನ್ನು ನಂಬುವುದು ಮತ್ತು ಅದನ್ನು ಅನುಸರಿಸಲು ಆಯ್ಕೆ ಮಾಡಿಕೊಳ್ಳುವುದರಲ್ಲಿ ಮನುಷ್ಯನಿಗೆ ಆಯ್ಕೆಮಾಡಿಕೊಳ್ಳುವ ಸಾಮರ್ಥ್ಯವಿದೆ ಎಂದು ಗೊತ್ತಾಗುತ್ತದೆ. ಈ ರೀತಿಯಾಗಿ ದೇವರ ಮೇಲೆ ಮನುಷ್ಯರು ಎದುರುಬೀಳುವುದರಿಂದ ಸೈತಾನನು ಆತನ ಮೇಲೆ ಅಧಿಕಾರವನ್ನು ಮಾಡಿದ್ದರಿಂದ ಅದು ಮರಣಕ್ಕೆ ದಾರಿ ತೋರಿಸಿತು. ಆದ್ದರಿಂದ ಮನುಷ್ಯರ ಪಾಪಗಳನ್ನು ತೆಗೆದು ಹಾಕುವುದಕ್ಕೆ ಮತ್ತು ಮರಣದ ಮೇಲೆ ಅಧಿಕಾರಗೋಸ್ಕರ ಒಬ್ಬ ವಿಮೋಚಕನು ಬೇಕಾಗಿದ್ದಾನೆ ಹಾಗಾಗಿ ಮನುಷ್ಯರ ಪಾಪಗಳನ್ನು ತೆಗೆದು ಹಾಕುವುದಕ್ಕೆ ಮೇಕೆಗಳ, ಕುರಿಗಳ ರಕ್ತದಿಂದ ಸಾಧ್ಯವಿಲ್ಲ "ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ"(ಇಬ್ರಿಯ10:14)ವಿಮೋಚನೆಯನ್ನು ಕ್ರಿಸ್ತನಲ್ಲಿ ಕಂಡುಕೊಳ್ಳಬಹುದು ಅದು ಹೇಗೆಂದರೆ ಕ್ರಿಸ್ತನ ಸುವಾರ್ತೆಯ ಮೂಲಕ ಮನುಷ್ಯರಿಗೆ ಬಿಡುಗಡೆಯಾಗುವುದು ಆ ಕ್ರಿಸ್ತನ ಸುವಾರ್ತೆಯ ಸಂದೇಶದ ಸಾರಾಂಶವೇನೆಂದರೆ:

–ಆದಿಯಲ್ಲಿ ವಾಕ್ಯಯವಿತ್ತು ಆತನೇ ಯೇಸುಕ್ರಿಸ್ತನು ಅಭಿಷೇಕಿಸಲ್ಪಟ್ಟ 'ಮೆಸ್ಸಿಯಾ'.

–ಆ ವಾಕ್ಯವು ಶರೀರ ಧಾರಿಯಾಗಿ ನಮ್ಮ ಮಧ್ಯದಲ್ಲಿ ವಾಸಮಾಡಿದನು.

–ಕ್ರಿಸ್ತನಲ್ಲಿ ಯಾವ ಪಾಪವೂ ಇಲ್ಲ.

–ಸೈತಾನನ ಬಂದನದಿಂದ ಮನುಷ್ಯನನ್ನು ಬಿಡುಗಡೆ ಮಾಡಿ ಪಾಪದಿಂದ ಮರಣವನ್ನು ಜಯಿಸುವಂತೆ ದೇವರು ಆತನನ್ನು ಮರಣದಿಂದ ಎಬ್ಬಿಸಿದನು.

–ಕ್ರಿಸ್ತನು ಎಲ್ಲಿಂದ ಬಂದನೊ ಅಲ್ಲಿಗೆ ಅಂದರೆ ಪರಲೋಕಕ್ಕೆ ಏರಿಹೊದನು.

–ಆತನ ರಕ್ತದಿಂದ ಯಾರು ಪಾಪ ಕ್ಷಮಾಪಣೆ ಹೊಂದುತ್ತಾರೊ ಅವರು ನಂಬಿಕೆಯಿಂದಿದ್ದರೆ ನಿತ್ಯಜೀವವನ್ನು ಹೊಂದುವರು ಎಂದು ಅತನು ಪ್ರಕಟಿಸಿದನು.

ಆತನಲ್ಲಿ ನಾವು ಸಮಾಧಾನ ಹೊಂದಿದೆವು ಯೇಸು ಈ ರೀತಿ ಹೇಳಿದನು "ನಾನೆ ಜೀವವು ಮಾರ್ಗವು ಸತ್ಯವು ಆಗಿದ್ದೇನೆ ನನ್ನ ಮೂಲಕ ಹೊರತು ಯಾರೂ ತಂದೆ ಬಳಿಗೆ ಬರುವುದಿಲ್ಲ" ಮತ್ತು ನಾವು ಆತನ ಆಜ್ಞೆಗ್ಗಳನ್ನು ಕೈಗೊಳ್ಳುವುದೇ, ದೇವರನ್ನು ಪ್ರೀತಿಸುವದು ಆತನ ಆಜ್ಞೆಗ್ಗಳು ಭಾರವಾದವುಗಳಲ್ಲ "ದೇವರ ಮೇಲಣ ಪ್ರೀತಿ ಏನೆಂದರೆ ಅತನ ಆಜ್ಞೆಗ್ಗಳನ್ನು ಕೈಗೊಂಡುನಡೆಯುವುದೇ. ಆತನ ಆಜ್ಞೆಗ್ಗಳು ಭಾರವದವುಗಳಲ್ಲ."(1ಯೋಹನ5:3).

ಒಬ್ಬ ರಕ್ಷಕನು ಬರುವನೆಂದು ಪ್ರವದಿಸಲಾಗಿದೆ:

ಅಬ್ರಹಾಮನ ಮೂಲಕ ಭೂಮಿ ಮೇಲೆ ಜನರನ್ನು ಆಶೀರ್ವಾದಿಸಲಾಗುವುದು ಎಂದು ದೇವರ ಮಾತುಗಳನ್ನು 4ನೇ ಪಾಠದಲ್ಲಿ ತಿಳಿದುಕೊಂಡಿದ್ದೇವೆ. ದೇವರು ದಾವೀದನನ್ನು ಕುರಿತು ಹೇಳುತ್ತಾ "ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು; ನಾನು ಅವನ ರಾಜ್ಯಸಿಂಹಾಸನವನ್ನು ನಿರಂತರವಾಗಿ ಸ್ಥಿರಪಡಿಸುವೆನು"(2ಸಮುವೇಲ7:13).ಮತ್ತು ಯೆಶಾಯನು ಈ ರೀತಿಯಾಗಿ ಪ್ರವಾದಿಸಿದನು "ಇಗೋ ಕನ್ನಿಕೆಯು ಗರ್ಭಿಣಿಯಾಗಿ ಮಗನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು"(ಯೆಶಾಯ7:14). ಅನೇಕ ವರ್ಷಗಳ ನಂತರ ಗಬ್ರಿಯೇಲ ದೂತ ಕನ್ಯೆಯಾದ ಮರಿಯಳೊಂದಿಗೆ ಒಬ್ಬ ಮಗನ್ನು ಹಡೆವಳು ಎಂದು ಹೇಳಿದನು ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು. ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಅತನ ಮೂಲಪಿತನಾದ ದಾವೀದನ ಸಿಂಹಾಸನವನ್ನುಆತನಿಗೆ ಕೊಡುವನು. ಅತನು ಯಕೋಬನ ವಂಶವನ್ನು ಸದಾ ಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು"(ಲೂಕ1:31–33).

ರಕ್ಷಕನನ್ನು ಕುರಿತದ ಸಾಕ್ಷಿಗಳು:

ಗಬ್ರಿಯೇಲ ದೂತ ಮೆಸ್ಸಿಯಾನ ಜನನ ವನ್ನುಕುರಿತು ಪ್ರವಾದಿಸಿದನು. ಸ್ನಾನಿಕನಾದ ಯೋಹನನು ಈ ರೀತಿಯಾಗಿ ಸಾಕ್ಷಿ ಹೇಳಿದನು "ನೀನು ಯಾರೆಂದು ಕೇಳಿದ್ದಕ್ಕೆ ಅವನು ಮರೆಮಾಜದೆ–ನಾನು ಕ್ರಿಸ್ತನಲ್ಲವೆಂದು ಎಲ್ಲರ ಮುಂದೆ ಹೇಳಿದನು"(ಯೋಹನ1:20). ಯೊರ್ದಾನ್ ಹೊಳೆಯಲ್ಲಿ ಆತನು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಈ ರೀತಿಯಾಗಿ ಹೇಳಿದನು "ಆಗ ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು"(ಮತ್ತಾಯ3:17). ತನ್ನ ಸ್ವಂತ ಊರಾದ ನಜರೇತಿನ ಸಮಾಜಮಂದಿರದಲ್ಲಿ ಯೇಸು ಯೆಶಾಯನ ಪ್ರವಾದನೆ ಗ್ರಂಥದಿಂದ ಓದಿದನು "ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರಳಿಯನ್ನು ಬಿಚ್ಚಿ ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು; ಆ ಮಾತೇನೆಂದರೆ– ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭಿಷೇಕಿಸಿದನು,

ಸೆರೆಯವರಿಗೆ ಬಿಡುಗಡೆಯಾಗುವುದನ್ನು ಮತ್ತು ಕುರುಡರಿಗೆ ಕಣ್ಣು ಬರುವುದನ್ನು ಪ್ರಸಿದ್ಧಿಪಡಿಸುವುದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವುದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚುರಪಡಿಸುವುದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ ಎಂದು ಓದಿದ ಮೇಲೆ ಆತನು ಆ ಸುರಳಿಯನ್ನು ಸುತ್ತಿ ಸಭಾಮಂದಿರದ ಆಳಿನ ಕೈಗೆ ಕೊಟ್ಟು ಕೂತುಕೊಂಡನು"(ಲೂಕ4:17–20). ಯೇಸು ಈ ಪ್ರವಚನ ವಾಕ್ಯಗಳನ್ನು ದೃಡಪಡಿಸುವುದಕ್ಕೆ ಅನೇಕ ಮಂದಿ ರೋಗಿಗಳನ್ನು, ಕುರುಡರನ್ನು, ಸ್ವಸ್ಥತೆ ಮಾಡಿದನು ಮತ್ತು ಸತ್ತವರನ್ನು ಮರಣದಿಂದ ಎಬ್ಬಿಸಿದನು. ಒಬ್ಬನು ಸತ್ತು ಶಿತಿಲವಾಗುತ್ತಿದ್ದ ದೇಹವನ್ನು ದೇಹದಿಂದ ಎಬ್ಬಿಸಿದನು ಈ ರೀತಿಯಾಗಿ ಆತನು ಶಕ್ತಿ ಮತ್ತು ಅಧಿಕಾರವನ್ನು ಹೊಂದಿ ದೇವರ ಮಗನಾಗಿ ಮತ್ತು ಮನುಷ್ಯ ಕುಮಾರನಾಗಿ ಗುರ್ತಿಸಿಕೊಂಡನು.

ಮನುಷ್ಯರ ಪಾಪವನ್ನು ತೊಲಗಿಸುವುದಕ್ಕೆ ಒಂದು ಪಾಪವಿಲ್ಲದ ಬಲಿ ಅವಶ್ಯಕವಾಗಿತ್ತು. ಆದ್ದರಿಂದ ಕ್ರಿಸ್ತನು ತನ್ನ ಭೌತಿಕವಾದ ಶರೀರವನ್ನು ಅದಕ್ಕೆ(ಪಾಪಕ್ಕೆ) ಬಲಿಯಾಗಿ ಸಮರ್ಪಿಸಿದನು. ಶಿಲುಬೆ ಮೇಲೆ ಮರಣಿಸಿ ಸಮಾಧಿ ಮಾಡಲ್ಪಟ್ಟು ಮತ್ತು ಪುನರುತ್ಥಾನವಾಗುವುದರೊಂದಿಗೆ ದೇವರು ಕ್ರಿಸ್ತನ ಬಲಿ ಅರ್ಪಣೆಯನ್ನು ಅಂಗೀಕಾರ ಮಾಡಿದನು ಮತ್ತು ದೇವರ ರೂಪದಿಂದ ಸೃಷ್ಟಿಯಲ್ಲಿ ಒಂದು ಭಾಗವಾದ ರಕ್ತ ದೇಹದಿಂದ ಭೂಲೋಕದಲ್ಲಿ ಇರುವುದಕ್ಕೆ ನಿರ್ಣಯಸಲಾಯಿತು. ಇದೆಲ್ಲಾ ಯಾಕೆ ಅವಶ್ಯಕವಾಗಿತ್ತು....? ಯಾಕೆಂದರೆ ಯೇಸು ದೇವರ ಮಗನೆಂದು, ಪಾಪವನ್ನು ಕ್ಷಮಿಸುವುದಕ್ಕೆ ಶಕ್ತಿ ಮತ್ತು ಅಧಿಕಾರ ಹೊಂದಿದ್ದಾನೆ ಎಂದು ಕ್ರಿಸ್ತನಲ್ಲಿಯೇ ಸರ್ವ ಮಾನವ ಜನಾಂಗದ ಪಾಪಗಳಿಗೆ ಕ್ಷಮಾಪಣೆ ಇದೆ ಎಂದು ಮನುಷ್ಯರು ತಿಳಿದುಕೊಳ್ಳಬೇಕು.

ಆಲ್ಲಿನ ಸಮೂಹಗಳು ಆತನ ಬೋಧನೆಯನ್ನು ಕೇಳುವರು ಆದರೆ ಅರ್ಥ ಮಾಡಿಕೊಳ್ಳಲಿಲ್ಲ ಅವರವರ ಆಚಾರಗಳಿಂದ, ಸಂಪ್ರದಾಯಗಳಿಂದ ಬೇರೆ ರೀತಿಯಾಗಿ ಕೇಳಿದರು. ಆತನ ಬೋಧನೆ ಒಂದು ಪ್ರೀತಿಯ ಸಂದೇಶ. ಆತನ ಭೋದನೆಯನ್ನು ಕುರಿತು ಲೇಖನೆಗಳಲ್ಲಿ ಈ ರೀತಿಯಾಗಿ ಹೇಳಲಾಗಿದೆ.

"ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವುದಕ್ಕೆ ಬಂದನು ಎಂದು ಹೇಳಿದನು"(ಲೂಕ19:10).

"ಎಲ್ಲೈ ಕಷ್ಟ ಪಡುವವರೇ, ಹೊರೆಹೊತ್ತವರೇ, ನಿವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಯನ್ನು ಕೊಡುವೆನು"(ಮತ್ತಾಯ11:28).

"ಕರ್ತನು ತನ್ನ ವಗ್ದಾನವನ್ನು ನೆರವೇರಿಸುವುದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಅತನು ತಡಮಾಡುವವನಲ್ಲ"(2ಪೇತ್ರ3:9).

“ಮನೆ ಕಟ್ಟುವವರಾದ ನೀವು ಹೀನೈಸಿದ ಕಲ್ಲು ಆತನು; ಆತನೇ ಮುಖ್ಯವಾದ ಮೂಲೆಗಲ್ಲಾದನು. ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ ಎಂದು ಹೇಳಿದನು”(ಅ.ಕೃ4:11–12).

“ಈ ಕೃಪಾದಾನವು ಆತನ ಪ್ರೀತಿಯಲ್ಲಿಯೇ ನಮಗೆ ದೊರೆಯಿತು. ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ. ಆತನು ರಹಸ್ಯವಾದ ತನ್ನ ಸಂಕಲ್ಪವನ್ನು ನಮಗೆ ತಿಳಿಯಪಡಿಸುವುದರ ಮೂಲಕ ವಿಶೇಷವಾದ ಜ್ಞಾನವನ್ನೂ ಬುದ್ಧಿಯನ್ನೂ ಕೊಟ್ಟು ಆ ಕೃಪೆಯನ್ನು ಇನ್ನೂ ಹೆಚ್ಚಾಗಿ ನಮಗೆ ತೋರಿಸಿದ್ದಾನೆ”(ಎಫೆಸ1:6–9).

ಆದ್ದರಿಂದ ಮನುಷ್ಯರ ಪಾಪ ವಿಮೋಚನೆಯನ್ನು ಕ್ರಿಸ್ತನಲ್ಲಿ ಕಂಡುಕೊಳ್ಳಬಹುದು. ಆದ್ದರಿಂದ ನಮಗೆ ಒಳ್ಳೆವಾರ್ತೆ, ಅಂದರೆ ಯೇಸು ಕ್ರಿಸ್ತನ ಸುವಾರ್ತೆಸಂದೇಶದಲ್ಲಿ ಪಾಪ ವಿಮೋಚನೆ ಇದೆ ಎಂದು ಈ ರೀತಿಯಾಗಿ ತಿಳಿಯಪಡಿಸಿದ್ದಾನೆ. “ಸಹೋದರರೆ ನಾನು ನಿಮಗೆ ತಿಳಿಸಿದ ಸುವಾರ್ತೆಯನ್ನು ನಿಮ್ಮ ನೆನಪಿಗೆ, ತರುತ್ತೇನೆ; ನೀವು ಅದನ್ನು ಸ್ವೀಕರಿಸಿದಿರಿ, ಅದರಲ್ಲಿ ನಿಂತಿದ್ದೀರಿ. ನಾನು ಯಾವ ಸಂಗತಿಯನ್ನು ಹೇಳಿ ನಿಮಗೆ ಸುವಾರ್ತೆಯನ್ನು ತಿಳಿಸಿದೆನೋ ನೀವು ಅದನ್ನು ಗಟ್ಟಿಯಾಗಿಹಿಡಿದುಕೊಂಡರೆ ಮತ್ತು ನಿಮ್ಮ ನಂಬಿಕೆಯು ನಿರಾಧಾರವಾಗದ ಪಕ್ಷಕ್ಕೆ ಆ ಸುವಾರ್ತೆಯಿಂದ ನಿಮಗೆ ರಕ್ಷಣೆಯಾಗುತ್ತದೆ. ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತು ಕೊಂಡದ್ದೇ. ಅದೇನೆಂದರೆ ಶಾಸ್ತ್ರದಲ್ಲಿ ಮಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು.”(1ಕೊರಿಂಥ15:1–4).

ಪ್ರಶ್ನೆಗಳು:

1.ಮನುಷ್ಯರ ಪಾಪಗಳಿಗೆ ಪರಿಪೂರ್ಣ ಬಲಿಯಾಗಿ ಅರ್ಪಿಸುವುದಕ್ಕೆ ದೇವರ ಮಗನಾದ ಕ್ರಿಸ್ತನು ಮನುಷ್ಯನಾಗಿ ಭೂಮಿಗೆ ಬಂದನು.

**a.**ಸರಿ **b.**ತಪ್ಪು

2.ಯೇಸು ಸರ್ವ ಅಧಿಕಾರ ಮತ್ತು ದೇವರ ಶಕ್ತಿಯನ್ನು ಆಧಾರ ಮಾಡಿಕೊಂಡಿದ್ದನು ಎಂದು ಹೇಳಲು ಯಾವ ಆಧಾರಗಳಿಲ್ಲ.

**a.**ಸರಿ **b.**ತಪ್ಪು

**3.ರಕ್ಷಣೆಯನ್ನು ಎಲ್ಲಿ ಕಂಡುಕೊಳ್ಳಬಹುದು.**

**a.ಸಂಪ್ರದಾಯಗಳಲ್ಲಿ**

**b.ಯೇಸು ಕ್ರಿಸ್ತನಲ್ಲಿ**

**c.ಮೋಶೆಯಲ್ಲಿ**

**d.ಪೋಪ್‌ನಲ್ಲಿ**

**4. ಸುವಾರ್ತೆ ಸಂದೇಶ ಅಂದರೆ ಕ್ರಿಸ್ತನ ಮರಣ, ಸಮಾಧಿ, ಪುನರುತ್ಥಾನ ಮತ್ತು ಪರಲೋಕಕ್ಕೆ ಹೋಗುವುದು, ನಮ್ಮ ಪಾಪಗಳು ಕ್ಷಮಿಸಲ್ಪಟ್ಟು ನಾವು ದೇವರೊಂದಿಗೆ ಸಮಾಧಾನ ಹೊಂದುವುದು.**

**a.ಸರಿ b.ತಪ್ಪು**

**5.ತಂದೆ ಬಳಿಗೆ ಬಂದು ಆತನೊಂದಿಗೆ ಸಮಾಧಾನ ಹೊಂದುವುದಕ್ಕೆ ನಮಗೆ ಹಲವಾರು ಮಾರ್ಗಗಳಿವೆ.**

**a.ಸರಿ b.ತಪ್ಪು**

***

## ಪಾಠ–16

## ಕ್ರಿಸ್ತನು ತನ್ನ ಸಭೆಯನ್ನು ಸ್ಥಾಪಿಸುವುದು

ಯೇಸು ತನ್ನ ಭೂಲೋಕದ ಸೇವೆಯಲ್ಲಿ ತನ್ನ ಶಿಷ್ಯರನ್ನು ಈರೀತಿಯಾಗಿ ಕೇಳಿದನು " ಆತನು ಅವರನ್ನು–ಆದರೆ ನೀವು ನನ್ನನ್ನು ಯಾರೆನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪೇತ್ರ–ನೀನು ಬರಬೇಕಾಗಿರುವ ಕ್ರಿಸ್ತನು. ಜೀವಸ್ವರೂಪವುಳ್ಳ ದೇವರ ಕುಮಾರನು ಎಂದು ಉತ್ತರ ಕೊಟ್ಟನು. ಅದಕ್ಕೆ ಯೇಸು–ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯರಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು.ಮತ್ತು ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನೆಂದರೆ–ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು"(ಮತ್ತಾಯ16:15–18).

ಸಭೆ ಎನ್ನುವ ಪದಕ್ಕೆ ಗ್ರೀಕ್ ಭಾಷೆಯಲ್ಲಿ 'ಎಕ್ಲಿಷಿಯ' (**ekklesia**) ಎಂದು ಹೇಳಲಾಗಿದೆ. ಇದರ ಅರ್ಥ 'ಕರೆಯಲ್ಪಟ್ಟವರು' ಅಂದರೆ ಒಂದು ಗುಂಪು ಅಥವಾ ಪ್ರತ್ಯೇಕವಾಗಿ ಮತ ಸಂಭಂದವಾದ ಒಂದು ಸಮೂಹ(ಯೆಹೊದ್ಯರ ಸಮಾಜ ಮಂದಿರದಿಂದ ಅಥವಾ ಭೂಮಿ ಮೇಲೆ ಕ್ರೈಸ್ತರು ಕೂಡಿಕೊಳ್ಳುವುದು ಅಥವಾ ಪರಲೋಕದಲ್ಲಿ ಪರಿಶುದ್ಧರು ಅಥವಾ ಈ ಎರಡೂ)(ಸ್ಟ್ರಾಂಗ್ ಗ್ರೀಕ್/ಇಬ್ರಿಯ ನಿಗಂಟು). ಆತನನ್ನು ದ್ವೇಷಿಸುತ್ತಿರುವ ಗುಂಪಿನ ಸಮಕ್ಷಮದಲ್ಲಿ ನಡೆದ ಒಂದು ವಿಚಾರಣೆಯಲ್ಲಿ ವ್ಯತಿರೇಕವಾದ/ವಿರುದ್ಧವಾದ ತೀರ್ಪಿನ ನಂತರ ರೋಮಾ ಸರ್ಕಾರ ದೇವರ ಮಗನನ್ನು ಶಿಲುಬೆಗೆ ಹಾಕಿದರು. ಆತನ ಮೇಲೆ ಸುಳ್ಳು ಸಾಕ್ಷಿ ಹೇಳಿ ತಪ್ಪು ಮಾಡಿದವನಂತೆ ಅರಸರಿಗೆ ಅರಸನಾದ ನಜರೇತಿನ ಯೇಸು ಕ್ರಿಸ್ತನನ್ನು ಆ ಯೆಹೂದ್ಯರು, ಧರ್ಮನಾಯಕರು, ಆತನನ್ನು ದ್ವೇಷಿಸಿದರು ಮತ್ತು ಶಿಲುಬೆಗೆ ಹಾಕುವುದನ್ನು ನೋಡಿ ಸಂತೋಷಪಟ್ಟರು.

ಆತನು ಮರಣಿಸುವುದಕ್ಕಿಂತ ಮುಂಚೆ 3ಗಂಟೆಗಳವರೆಗೂ ಯೆರೂಸಲೇಮಿನಲ್ಲಿ ಕತ್ತಲೆ ಕವಿಯಿತು. ಯೇಸು ಮರಣಿಸುವುದಕ್ಕಿಂತ ಮುಂಚೆ ಹೇಳಿದ ಸಂಗತಿಗಳನ್ನು ಯೋಹಾನನು ಈ ರೀತಿ ಹೇಳಿದ್ದಾನೆ "ಈ ಮಾತುಗಳ ದೆಸೆಯಿಂದ ಯೆಹೂದ್ಯರಲ್ಲಿ ತಿರಿಗಿ ಭೇದವಾಯಿತು. ಅವರಲ್ಲಿ ಅನೇಕರು–ಅವನಿಗೆ ದೆವ್ವಹಿಡಿದಿದೆ, ಹುಚ್ಚು ಹಿಡಿದಿದೆ, ಯಾಕೆ ಅವನ ಮಾತು ಕೇಳುತ್ತೀರಿ? ಅಂದರು. ಮತ್ತು ಕೆಲವರು–ಇವು ದೆವ್ವ ಹಿಡಿದವನ ಮಾತುಗಳಲ್ಲ; ದೆವ್ವವು ಕುರುಡರಿಗೆ ಕಣ್ಣುಕೊಡಬಲ್ಲದೇ? ಅಂದರು"(ಯೋಹಾನ10:19–20). ಭೂಮಿ ನಡುಗಿತು, ಬಂಡೆಗಳು ಒಡೆದವು,ಸ 'ತ್ತುಹೋದ ಅನೇಕ ಮಂದಿ ಎಬ್ಬಿಸಲ್ಪಟ್ಟರು(ಯೇಸು ಪುನರುತ್ಥಾನದ ನಂತರ ಅವರು ಪಟ್ಟಣದಲ್ಲಿ ಪ್ರವೇಶಿಸಿ ಅನೇಕ ಜನರಿಗೆ ಕಾಣಿಸಿಕೊಂಡರು) ರೋಮಾ ಸೈನಿಕರು ಸಹ ನಡೆದ ಸಂಗತಿಯನ್ನು ಏನೋ...... ನಡೆಯುತ್ತಿದೆ ಎಂದು ಗಮನಿಸಿ ಪಿಲಾತನು ಆತನ

ಶಿಲುಬೆಯ ಮೇಲೆ ಬರೆದಿರುವಂತೆ ಹೀಗೆ ಹೇಳಿದರು "ಈತನು ನಿಜವಾಗಿ ದೇವರ ಮಗನು" ಯೆಹೂದ್ಯರು ಆತನನ್ನು ತಪ್ಪಿತಸ್ತನನ್ನಾಗಿ ಮಾಡಿದರು ಆದರೆ ಈ ವಿಷಯದಲ್ಲಿ ನಾಚಿಕೆ ಪಡದೆ ಅನೇಕ ಮಂದಿ ಈಗ ತಿಳಿದುಕೊಳ್ಳುತ್ತಿದ್ದಾರೆ ಮತ್ತು ಆತನನ್ನು ತಿರಸ್ಕರಿಸಿ ಶಿಲುಬೆಗೆ ಹಾಕಿಸಿದ ಧರ್ಮ ಅಧಿಕಾರಿಗಳು ಪ್ರತ್ಯೇಕವಾಗಿ ಆತನು ದೇವರ ಮಗನು ಎಂದು ಈಗ ತಿಳಿದುಕೊಳ್ಳುತ್ತಿದ್ದಾರೆ ಆದರೆ ಈ ಸಂಗತಿಗಳನ್ನು ಅವರು ಯಾವರೀತಿಯಾಗಿ ವಿವರಿಸುವರು? ಅವರು ಆತನನ್ನು ನಂಬುವುದಕ್ಕೆ ಇಷ್ಟಪಡಲಿಲ್ಲ ಆದ್ದರಿಂದ ಆ ಸಂಗತಿಗಳನ್ನು ವಿವರಿಸಲಾಗುವುದಿಲ್ಲ.

ಆದರೆ ಸೈತಾನನು ಯೇಸುವನ್ನು ಸಮಾಧಿಯಲ್ಲಿ ಬಂದಿಸಲಿಲ್ಲ ದೇವರು ಆತನನ್ನು ಮೂರನೇ ದಿನ ತಿರಿಗಿ ಎಬ್ಬಿಸಿದನು. ಆದರೆ ಭೂಲೋಕದಲ್ಲಿ ಯೇಸು ಕ್ರಿಸ್ತನ ಸೇವೆಯು ಇನ್ನು ಪೂರ್ತಿಯಾಗಲಿಲ್ಲ. ಆತನು ಅನೇಕ ಜನರಿಗೆ ಕಾಣಿಸಿಕೊಂಡನು ಮತ್ತು ಏರ್ಪಾಟು ಮಾಡಿಕೊಂಡಿರುವ ಶಿಷ್ಯರಾದ ಆ ಸಾಕ್ಷಿಗಳಿಗೆ ಕಾಣಿಸಿಕೊಂಡು ಈ ರೀತಿಯಾಗಿ ಆಜ್ಞಾಪಿಸಿದನು. "ಆಗ ಯೇಸು ಹತ್ತರಕ್ಕೆ ಬಂದು– ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ; ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ ನೋಡಿರಿ ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು"(ಮತ್ತಾಯ28:18–20).

"ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ–ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಲು"(ಅ.ಕೃ2:37). ಅಂದರೆ ಆ ದಿನ ಅವರಿಗೆ ಅವಕಾಶಕೊಟ್ಟಂತೆ ಈ ದಿನ ನಮಗೆ ಸಹ ದೇವರು ಅವಕಾಶಗಳನ್ನು ಕೊಟ್ಟಿದ್ದಾನೆ ಪೇತ್ರನ ಹತ್ತಿರ ಅವರು ಯಾವ ರೀತಿಯಾಗಿ ಸ್ಪಂದಿಸಿದರೊ ನೋಡಿರಿ ಆ ರೀತಿಯಾಗಿ ಸ್ಪಂದಿಸುವುದಕ್ಕೆ ನೀವು ಸಹ ಆಲೋಚನೆ ಮಾಡಿರಿ. ಆತನು ಪರಲೋಕಕ್ಕೆ ಹೋದ ಹತ್ತು ದಿನಗಳ ನಂತರ ಪಂಚಾಶತ್ತಮ ದಿನದಂದು ಅ.ಕೃ 2ನೇ ಅಧ್ಯಾಯದಲ್ಲಿ ಬರೆದಿರುವಂತೆ ಕ್ರಿಸ್ತನು ಒಂದು ಸಭೆಯನ್ನು ಕಟ್ಟಿದನು/ಸ್ಥಾಪಿಸಿದನು. ಆ ಸಭೆ "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವುದರಿಂದ ನಿಮ್ಮ ವಿಷಯದಲ್ಲಿಯೂ ಆ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ"(ಅ.ಕೃ 20:28).

"ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು ಆತನು ಆದಿಸಂಭೂತನು"(ಕೊಲೊಸ್ಸೆ1:18).

“ಆ ಸಭೆಯು ಆತನ ದೇಹವಾಗಿದೆ; ಎಲ್ಲಾವನ್ನೂ ಎಲ್ಲಾ ಸಂದರ್ಭದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ”(ಎಫೆಸ1:23).

ಪ್ರಶ್ನೆಗಳು:

1.ಕ್ರಿಸ್ತನು ಪಾಪವಿಲ್ಲದ ತನ್ನ ಶರೀರವನ್ನು ಮನುಷ್ಯರ ಪಾಪಗಳಿಗೋಸ್ಕರ ಪರಿಪೂರ್ಣವಾಗಿ ಸಮರ್ಪಿಸಿದನು.

a.ಸರಿ b.ತಪ್ಪು

2.ರಕ್ಷಣೆ ಹೊಂದಿದವರು ಅಂದರೆ ಕ್ರಿಸ್ತನ ಶರೀರದಲ್ಲಿ ಸೇರಿಸಲ್ಪಟ್ಟವರು ಜೀವವುಳ್ಳ ದೇವರ ಮಂದಿರವಾಗಿ ದೇವರ ಚಿತ್ತವನ್ನು ನೆರವೇರಿಸುವರು. ಆದರೆ ಒಂದು ಸಂಸ್ಥೆಯಂತೆ ಅಲ್ಲ.

a.ಸರಿ b.ತಪ್ಪು

3.ಯೇಸು ಕ್ರಿಸ್ತನು ಸ್ಥಾಪಿಸಿದ ಸಭೆ ಅಂದರೆ ಲೋಕದಲ್ಲಿನ ಪಾಪದಿಂದ ಆತನ ಮಾತುಗಳಿಗೆ ಒಳಗಾಗಿ ಬಂದಂತ ಒಂದು ಸಮೂಹ.

a.ಸರಿ b.ತಪ್ಪು

4.ಕ್ರಿಸ್ತನ ಸಭೆಗೆ ಬುನಾದಿ ಯಾರು?

a.ಅಪೊಸ್ತಲರು

b.ದೇವಾಯಲ/ಸಮಾಜ ಮಂದಿರ

c.ದೇವರ ಮಗನಾದ ಕ್ರಿಸ್ತನು

5. ಕ್ರಿಸ್ತನ ಶರೀರ ಅಂದರೆ ಕ್ರಿಸ್ತನ ಸಭೆಯೊಳಗೆ ಹೇಗೆ ಸೇರಿಸಲ್ಪಡುವರು?

a.ವಾರಸತ್ವದ ಮೂಲಕ

b.ಸದಸ್ಯರ ಬಹುಮತ ಚಲಾಯಿಸುವುದರ ಮೂಲಕ

c.ದೇವರ ಮೂಲಕ

***

## ಪಾಠ–17

## ಬೈಬನಲ್ಲಿ ಬರುವ ವ್ಯಕ್ತಿಗಳ ನಿರ್ಣಯಗಳು

ನಾವು ಪ್ರತಿದಿನ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ ಅವುಗಳಲ್ಲಿ ಕೆಲವೊಂದು ದಿನಾಲೂ ನಡೆಯುವಂತವುಗಳಾಗಿವೆ ಅವುಗಳಲ್ಲಿ ತಿನ್ನುವುದು, ಬಿಡುವುದು, ನಡೆಯುವುದು ಮತ್ತು ಮಾತನಾಡಿವುದು ಹೀಗೆ ಕೆಲವು ವಿಷಯಗಳು.

ಮನುಷ್ಯರ ಈ ರೀತಿಯಾದ ನಿರ್ಣಯಗಳಿಂದ ಕೆಲವೊಂದು ಸಂದರ್ಭಗಳಲ್ಲಿ ಊಹಿಸಲಾಗದ ಸಂತೋಷವು, ಆನಂದ ಉಂಟಾಗುವುದು. ಮತ್ತು ಕೆಲವೊಂದು ಸಮಯದಲಿ ಇತರರಿಗೆ ಇವುಗಳಿಂದ ನಿರುತ್ಸಾಹ, ತಲೆನೋವು ಸಹ ಉಂಟಾಗುವುದು. ನಮ್ಮ ಕುಟುಂಬದ ಭಂದುತ್ವ ನಿಲ್ಲುವುದಕ್ಕೆ ಕೆಲವು ದೊಡ್ಡ ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ. ಅವು ಮತ ಪರವಾಗಿಯೂ ಅಥಾವ ಉದೋಗದಲ್ಲಿ ಬೆಸೆದುಕೊಂಡು ಸಾವು ನೋವು ಬದುಕಿನ ಮಧ್ಯದಲ್ಲಿ ನಮ್ಮ ಜೀವಿತವು ನಿಂತಿರುವುದಕ್ಕೆ ಸಂಭಂದಿಸಿರುತ್ತದೆ. ಕೆಲವು ವ್ಯಕ್ತಿಗಳು ಕೆಟ್ಟ ನಿರ್ಣಯಗಳನ್ನು ಮತ್ತು ಕೆಲವರು ಒಳ್ಳೆ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆಂದು ನಮ್ಮೆಲ್ಲರಿಗೂ ಗೊತ್ತು ಅದು ಒಳ್ಳೆದಾಗಿಯೂ ಅಥವಾ ಕೆಟ್ಟ ನಿರ್ಣಯವಾದರೂ ಅದರದರ ಫಲಿತಾಂಶ ವಿರುತ್ತದೆ. ಗ್ರಂಥದಲ್ಲಿ(ಬೈಬಲ್‌ನಲ್ಲಿ) ಕೆಲವು ವ್ಯಕ್ತಿಗಳು ತೆಗೆದುಕೊಂಡ ನಿರ್ಣಯಗಳಲ್ಲಿ[ತೀರ್ಮಾನ] ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

ನಿರ್ಣಯಗಳು ಮತ್ತು ಅವುಗಳ ಪ್ರತಿಫಲಗಳು:

1.ತಿನ್ನಬಾರದು ಎಂದು ಹೇಳಿದ ಹಣ್ಣನ್ನು ಆದಾಮ ಮತ್ತು ಅವ್ವಳು ತಿಂದರು.

ಪ್ರತಿಫಲ: ಮರಣ,ಏದೇನು ತೋಟದಿಂದ ಹೊರಗೆ ಮತ್ತು ದುಃಖ ಕಷ್ಟಗಳು.

2.ಅಂಗೀಕರಿಸದ ಅರ್ಪಣೆಯನ್ನು ಕಾಯಿನನು ಅರ್ಪಿಸಿದ್ದು.

ಪ್ರತಿಫಲ: ದೇವರು ಆತನನ್ನು ತಿರಸ್ಕರಿಸಿದನು.

3.ಕಾಯಿನನು ತನ್ನ ತಮ್ಮನನ್ನು ಸಾಯಿಸಿದನು.

ಪ್ರತಿಫಲ: ಮುದ್ರೆ ಹಾಕಲ್ಪಟ್ಟು ದೇಶದ್ರೋಹಿಯಾದನು.

4.ನೋಹನನು ನಾವೆ ಕಟ್ಟಿದನು.

ಪ್ರತಿಫಲ: ನೀತಿವಂತನೆಂದು ಕರೆಸಿಕೊಂಡನು ಮಾನವ ಜನಾಂಗವನ್ನು ಕಾಪಾಡಿದನು.

5.ಅಬ್ರಹಾಮ ತನ್ನ ಮಗನನ್ನು ಬಲಿ ಕೊಟ್ಟನು.

ಪ್ರತಿಫಲ: ವಾಗ್ದಾನವನ್ನು ಹೊಂದುದನು.

6.ಮೋಶೆ ದೇವರನ್ನು ಹಿಂಬಾಲಿಸಿದನು.

ಪ್ರತಿಫಲ: ಒಬ್ಬ ದೊಡ್ಡ ಜನಾಂಗಕ್ಕೆ ನಾಯಕನಾದನು.

7.ದೇವರ ಕೆಲಸದಲ್ಲಿ ಉಪಯೋಗವಾಗುವುದಕ್ಕೆ ಮರಿಯಳು ಇಷ್ಟಪಟ್ಟಳು.

ಪ್ರತಿಫಲ: ನಮಗೋಸ್ಕರ ಬಲಿಯಾದ ಯೇಸು ಕ್ರಿಸ್ತನಿಗೆ ಜನ್ಮ ಕೊಟ್ಟಳು.

8.ಹಣಕ್ಕೋಸ್ಕರ ಯೂದ ಯೇಸುವನ್ನು ಹಿಡುಕೊಟ್ಟನು.

ಪ್ರತಿಫಲ:ಆತ್ಮ ಹತ್ಯೆ ಮಾಡಿಕೊಂಡನು.

9.ಪೌಲನು ಮಾನಸಾಂತರ ಹೊಂದಿ ದೇವರಿಗೆ ಒಳಗಾಗಿ ದೀಕ್ಷಾಸ್ನಾನ ಹೊಂದಿದನು.

ಪ್ರತಿಫಲ: ಅನ್ಯ ಜನರಿಗೆ ಅಪೊಸ್ತಲನಾದನು.

ಆತನನ್ನು ಸಂತೋಷಪಡಿಸುವುದಕ್ಕೆ ಮತ್ತು ಆತನಿಗೆ ಒಳಗಾಗುವುದಕ್ಕೆ ಅರ್ಥ ಮಾಡಿಕೊಂಡು ದೇವರ ಜ್ಞಾನದಲ್ಲಿ ಬೆಳೆಯುವುದಕ್ಕೆ ಸಂಭಂದಿಸಿದ ಅನೇಕ ಅವಕಾಶಗಳಲ್ಲಿ ನಾವು ಪ್ರತಿ ದಿನ ಸಂಬಂಧವನ್ನು ಹೊಂದಿದ್ದೇವೆ. ಕೆಳಗಿನ ವಿಷಯಗಳನ್ನು ಗಮನಿಸೋಣ.

1.ನಮ್ಮ ವ್ಯಾಪಾರದಲ್ಲಿ, ಕುಟುಂಬದಲ್ಲಿ ಮತ್ತು ಆತ್ಮೀಯ ಜೀವಿತದಲ್ಲಿ ನಾವು ನೀತಿವಂತರಾಗಿ ಇರುವೆವಾ? ಇರುತ್ತೀದ್ದೇವಾ?.

2.ನಮಗೆ ನಾವು, ಕುಟುಂಬ ಸಹಕಾರಿಯೊಂದಿಗೆ ಮತ್ತು ಮಕ್ಕಳಿಗೆ ನಂಬಿಗಸ್ತರಾಗಿದೇವಾ? ಇರುತ್ತೀದ್ದೇವಾ?.

3.ನಮ್ಮ ಮನಸ್ಸು, ಕಣ್ಣುಗಳನ್ನು ಮತ್ತು ನಾಲಿಗೆಯನ್ನು ಹಿಡಿತದಲ್ಲಿಟ್ಟಿದ್ದೇವಾ? ಇಡುತ್ತೀದ್ದೇವಾ?

4.ನಾವು ವಿಧೇಯರಾಗಿ ಮತ್ತು ದೇವರ ಆಜ್ಞೆಗಳಿಗೆ ಒಳಗಾಗಿ ದೇವರೊಂದಿಗೆ ಸಮಾಧಾನ ಹೊಂದಿದ್ದೇವಾ? ಹೊಂದುತ್ತೀದ್ದೇವಾ?

ನಮ್ಮ ನಿರ್ಣಯಗಳು ಅವುಗಳಿಂದ ಎದುರಾಗುವ ಫಲಿತಾಂಶವು ಒಳ್ಳೆದಾಗಿಯೂ ಅಥಾವ ಕೆಟ್ಟದ್ದಾಗಿಯೂ ಎದುರುಸುತ್ತಿದ್ದೇವೆ. ಮನುಷ್ಯರ ಆಲೋಚನೆಗಳು ವಿರುದ್ಧವಾಗಿದ್ದರೆ ಅವುಗಳ ಪ್ರತಿಫಲ ಸಹ ದೇವರಿಗೆ ವಿರುದ್ಧವಾಗಿರುತ್ತದ್ದೆ. ಮನುಷ್ಯರು ಕಲ್ಪಿಸಿಕೊಂಡ ಪದ್ಧತಿಗಳು ಸಹ ಅಂತವುಗಳೇ."ಹೀಗೆ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕಮಾಡಿದ್ದೀರಿ. ಕಪಟಿಗಳೇ, ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು

ಬರೆದದ್ದೇನೆಂದರೆ– ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಭೋದಿಸುವುದರಿಂದ ನನಗೆ ಭಕ್ತಿ ತೋರಿಸುವುದು ವ್ಯರ್ಥ ಎಂಬದೇ"(ಮತ್ತಾಯ15:6–9).

ಪ್ರಶ್ನೆಗಳು:

1.ನಮ್ಮ ಜೀವಿತದಲ್ಲಿ ಪ್ರತಿ ನಿರ್ಣಯವು ಒಂದು ದೊಡ್ಡ ನಿರ್ಣಯವಾಗಿದೆ.

a.ಸರಿ b.ತಪ್ಪು

2.ಸರಿಯಾದ ನಮ್ಮ ನಿರ್ಣಯಗಳು ಅದರ ಪ್ರತಿಫಲಗಳು ನಮ್ಮ ಜೀವಿತವನ್ನು ಪ್ರಭಾವಿತಗೊಳಿಸುತ್ತವೆ.

a.ಸರಿ b.ತಪ್ಪು

3.ಅವೀಧೇಯತೆಯನ್ನು ಆಯ್ಕೆ ಮಾಡಿಕೊಂಡ ಸಂದರ್ಭದಲ್ಲಿ ಅದರಿಂದ ಪ್ರತಿಫಲವು ಭಾದೆಯಿಂದ, ದುಃಖದಿಂದ ಕೂಡಿರುತ್ತದೆ ಮತ್ತು ವಿಧೇಯತೆಯನ್ನು ಆಯ್ಕೆ ಮಾಡಿಕೊಂಡ ಸಂದರ್ಭದಲ್ಲಿ ಅದು ಅವರಿಗೆ ಸಂತೋಷವನ್ನು, ಆನಂದವನ್ನು ತರುತ್ತದೆ ಎನ್ನುವು ಬೈಬಲ್ ನಲ್ಲಿ ಹೇಳಿರುವ ವ್ಯಕ್ತಿಗಳಿಂದ ತಿಳಿದುಬರುತ್ತದೆ.

a.ಸರಿ b.ತಪ್ಪು

4.ಆದಾಮ ಮತ್ತು ಅವ್ವಳ ನಿರ್ಣಯಗಳಿಗೆ ಎಂತಹ ಫಲಿತಾಂಶವನ್ನು ನೀಡಲಾಯಿತು.

a.ದುಃಖ ಮತ್ತು ಮರಣವು

b.ಬಹಳ ಅಭಿವೃದ್ಧಿ ಹೊಂದಿದರು

5.ಪೌಲನ ನಿರ್ಣಯಗಳಿಗೆ ದೊರೆತ ಫಲಿತಾಂಶ

a.ಅನ್ಯಜನರಿಗೆ ಅಪೊಸ್ತಲನಾದನು.

b.ಯೆಹೂದ್ಯ ಮತ ನಾಯಕನಾದನು ಯೆಹೂದ್ಯರ ಪಾಠ ಶಾಲೆಯಲ್ಲಿ ರಬ್ಬಿ ಆದನು.

***

## ಪಾಠ–18

## ಯೇಸುವನ್ನು ದೇವರ ಮಗನೆಂದು ನಂಬುವುದು

ಮಾನಸಾಂತರವನ್ನು ಕುರಿತು ಪ್ರಕಟಿಸಿದ ಯೇಸು ಈ ರೀತಿಯಾಗಿ ಸಹ ಭೋದಿಸಿದನು.

"ನನ್ನನ್ನು ನಂಬುವವನು ಸತ್ತರೂ ಬದುಕುವನು: ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನೂ ಎಂದಿಗೂ ಸಾಯುವುದಿಲ್ಲ; ಇದನ್ನು ನಂಬುತ್ತಿಯಾ? ಎಂದು ಹೇಳಿದನು"(ಯೋಹಾನ11:26).

"ಕಾಲವು ಪರಿಪೂರ್ಣವಾಯಿತು, ದೇವರ ರಾಜ್ಯ ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ನಂಬಿರಿ ಎಂದು ದೇವರ ಸುವಾರ್ತೆಯನ್ನು ಸಾರಿ ಹೇಳಿದನು"(ಮಾರ್ಕ1:15).

"ಯೇಸು ಕೂಗಿ ಹೇಳಿದ ಮಾತು ಏನಂದರೆ–ನನ್ನನ್ನು ನಂಬಿದವನು ನನ್ನನ್ನೇ ನಂಬುವವನಲ್ಲ; ನನ್ನನ್ನು ಕಳುಹಿಸಿ ಕೊಟ್ಟಾತನನ್ನು ನಂಬುವವನಾಗಿದ್ದಾನೆ. ಮತ್ತು ನನ್ನನ್ನು ನೋಡುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನು ನೋಡುವವನಾಗಿದ್ದಾನೆ. ನನ್ನನ್ನು ನಂಬುವ ಒಬ್ಬನಾದರೂ ಕತ್ತಲಲ್ಲಿ ಇರಬಾರದೆಂದು ನಾನು ಬೆಳಕಾಗಿ ಲೋಕಕ್ಕೆ ಬಂದಿದ್ದೇನೆ. ಯಾವನಾದರು ನನ್ನ ಮಾತುಗಳನ್ನು ಕೇಳಿದರೂ ಕೈಗೊಂಡು ನಡೆಯದೆ ಹೋದರೆ ನಾನೇ ಅವನಿಗೆ ತೀರ್ಪುಮಾಡುವುದಿಲ್ಲ; ಲೋಕ್ಕೆ ತೀರ್ಪುಮಾಡುವುದಕ್ಕಾಗಿ ನಾನು ಬಂದಿಲ್ಲ; ಲೋಕವನ್ನು ರಕ್ಷಿಸುವುದಕ್ಕಾಗಿ ಬಂದಿದ್ದೇನೆ. ನನ್ನನ್ನು ಲಕ್ಷಮಾಡದೆ ನನ್ನ ಮಾತುಗಳನ್ನು ಅಂಗೀಕರಿಸದೆ ಇರುವವನಿಗೆ ತೀರ್ಪು ಮಾಡುವಂಥದು ಒಂದು ಇದೆ. ಅದು ಯಾವುದೆಂದರೆ ಅದು ನಾನು ಆಡಿದ ಮಾತು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವುದು. ಯಾಕೆಂದರೆ ನನ್ನಷ್ಟಕ್ಕೆ ನಾನೇ ಮಾತನಾಡಿದವನಲ್ಲ; ನನ್ನನ್ನು ಕಳುಹಿಸಿ ಕೊಟ್ಟ ತಂದೆಯೇ–ನೀನು ಇಂಥಿಂಥದ್ದನ್ನು ಹೇಳಬೇಕು,ಹೀಗೆ ಹೀಗೆ ಮಾಡಬೇಕು ಎಂಬುದಾಗಿ ನನಗೆ ಆಜ್ಞೆಕೊಟ್ಟಿದ್ದಾನೆ. ಆತನ ಆಜ್ಞೆ ನಿತ್ಯಜೀವವಾಗಿದೆ ಎಂದು ಬಲ್ಲೆನು. ಆದದರಿಂದ ನಾನು ಮಾತಾಡುವದನ್ನೆಲ್ಲಾ ತಂದೆ ನನಗೆ ಹೇಳಿದ ಮೇರೆಗೆ ಮಾತಾಡುತ್ತೇನೆ ಅಂದನು"(ಯೋಹಾನ12:44–50).

"ಯೇಸು ಅವನಿಗೆ– ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಗೊಂಡು ನಡೆಯುವನು; ಅವನನ್ನು ನನ್ನ ತಂದೆ ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳವೆವು. ನನ್ನನ್ನು ಪ್ರೀತಿಸದೆ ಇರುವವನು ನನ್ನ ಮಾತುಗಳನ್ನು ಕೈಗೊಂಡು ನಡೆಯುವುದಿಲ್ಲ; ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೆ"(ಯೋಹಾನ14:23–24).

“ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಹೊಂದಬೇಕೆಂದು ಆತನನ್ನು ಕೊಟ್ಟನು”(ಯೋಹಾನ3:16).

“ಆಗ ಯೇಸು ಹತ್ತರಕ್ಕೆ ಬಂದು–ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ; ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ ನೋಡಿರಿ ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು”(ಮತ್ತಾಯ28:18–20).

ನಾವು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ. ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಕೆಲಸ ಮಾಡುವುದಕ್ಕೆ ಸಾಮಾರ್ಥ್ಯ ಸಹ ಕೊಡಲಾಗಿದೆ. ಪ್ರವಚನಗಳು ಮತ್ತು ಅವುಗಳು ನೆರವೇರಿರುವುದನ್ನು ಸಹ ನಾವು ನೋಡಿದ್ದೇವೆ. ಮನುಷ್ಯನು ದೇವರೊಂದಿಗೆ ಸಮಾಧಾನ ಹೊಂದುವುದಕ್ಕೆ  ದೇವರು ಒಂದು ಮಾರ್ಗವನ್ನು, ಒಂದು ಪದ್ಧತಿಯನ್ನು, ಒಂದು ಪ್ರಣಾಳಿಕೆಯನ್ನು(ಸಂಕಲ್ಪ) ಏರ್ಪಡಿಸಿರುವುದನ್ನು ಸಹ ನೋಡಿದ್ದೇವೆ. ಭಕ್ತಿಹೀನತೆ ಮತ್ತು ಪಾಪಗಳಿಂದ ತಿರಿಗಿಕೊಳ್ಳಿರಿ ಎಂದು ಯೇಸು ಮಾನಸಾಂತರವನ್ನು ಕುರಿತು ಪ್ರಕಟಿಸಿದನು. ಆತನು ನಮಗೆ ಪ್ರೀತಿ, ಒಳ್ಳೆತನವನ್ನು ಮತ್ತು ಯಥಾರ್ತತೆಯನ್ನು ಬೋಧಿಸಿದನು. ಬೋಲೋಕ್ಕೆ ಬಂದ ಮೆಸ್ಸಿಯಾ ಅಂದರೆ ಕ್ರಿಸ್ತನು ಆತನೇ ಎಂದು ನಂಬುವಂತೆ ವಿಶ್ವಾಸವನ್ನು ಬೋಧಿಸಿದನು ಆತನೇ ನಮ್ಮ ಪಾಪಗಳಿಗೆ ಪರಿಪೂರ್ಣಬಲಿ, ಆತನ ಆಜ್ಞೆಗಳಿಗೆ ಒಳಗಾಗುವುದಾದರೆ ಅದು ಆತನಲ್ಲಿ ನಮ್ಮ ನಂಬಿಕೆಯನ್ನು ತೋರಿಸುತ್ತದ್ದೆ. ಆತನ ಉಪದೇಶ ಅಧಿಕಾರದಿಂದ ಕೂಡಿರುವಂತದ್ದು. ನಿಜವಾಗಿ ಆತನ ಪುನರುತ್ಥಾನದ ನಂತರ ಸರ್ವಅಧಿಕಾರವನ್ನು ಆತನಿಗೆ ಕೊಡಲಾಯಿತು. ನೋಡಿದವುಗಳಿಗಿಂತ ಅಥಾವ ಕೇಳಿದವುಗಳಿಗಿಂತ  ಆತನ ಬೋಧನೆ ಪ್ರತ್ಯೇಕವಾಗಿದೆ ಪ್ರಾರಂಭದ ಮೊದಲ ಮನುಷ್ಯನಲ್ಲಿ ಮಾನಸಾಂತರ ಹೊಂದಿದಂತ ವೈಕರಿಯನ್ನು ಆತನ ಭೋದನೆಯು ಆಪೇಕ್ಷಿಸುತ್ತದೆ. ಜೀವನ ಶೈಲಿಯಲ್ಲಿ ಒಂದು ಬದಲಾವಣೆ(ಮಾರುಮನಸ್ಸು) ಉಂಟುಮಾಡುವ(ತರುವ) ದೇವರ ಪ್ರೀತಿಯೇ ಆತನ ಸಂದೇಶವಾಗಿದೆ.

“ದೇವರ ಮೇಲಣ ಪ್ರೀತಿ ಏನೆಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದೆ.”(1ಯೋಹಾನ5:3).

“ದೇವರ ಆಜ್ಞೆಗಳನ್ನು ಅನುಸರಿಸಿ  ನಡೆಯುವುದೇ ಪ್ರೀತಿ; ಪ್ರೀತಿಯಲ್ಲಿ ನಡೆಯಬೇಕೆಂಬದೇ ನೀವು ಮೊದಲಿನಿಂದಲೂ ಕೇಳಿದ ಅಪ್ಪಣೆಯಾಗಿದೆ”(2ಯೋಹಾನ1;6).

“ಹೇಗೆಂದರೆ–ದೇವರು ಯಾರನ್ನು ಕಳುಹಿಸಿದ್ದಾನೋ ಆತನಿಗೆ ಆತ್ಮ ವರವನ್ನು ಅಳತೆ ಮಾಡದೆ ಅನುಗ್ರಹಿಸಿರುವುದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ”(ಯೋಹಾನ3:34).

“ನಾವು ನಿಮಗೆ ಪ್ರಸಿದ್ಧಿಪಡಿಸುವ ಜೀವ ವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರ ಕೇಳಿ ಕಣ್ಣಾರೆ ಕಂಡು ಮನಸ್ಸಿಟ್ಟು ನೋಡಿ ಕೈಯಿಂದಮುಟ್ಟಿದ್ದೇವೆ. ಆ ಜೀವವು ಪ್ರತ್ಯಕ್ಷವಾಯಿತು; ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂತ ಆ ನಿತ್ಯಜೀವವನ್ನು ಕಂಡು ಅದನ್ನು ಕುರಿತು ಸಾಕ್ಷಿಹೇಳಿ ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ”(1ಯೋಹಾನ1:1–2).

ಪ್ರಶ್ನೆಗಳು:

1.ಯೇಸು ಕ್ರಿಸ್ತನಿಗೆ ಸರ್ವ ಅಧಿಕಾರಕೊಡಲ್ಪಟ್ಟಿದೆ.

a.ಸರಿ b.ತಪ್ಪು

2.ಒಬ್ಬ ವ್ಯಕ್ತಿ ಕ್ರಿಸ್ತನಲ್ಲಿ ನಂಬಿಕೆಯನ್ನಿಡಬಹುದು. ಅದರೆ ಯೇಸು ಕ್ರಿಸ್ತನು ಕೋರಿರುವಂತೆ ಮಾಡುವಗತ್ಯತೆ ಮತ್ತು ಒಳಗಾಗುವ ಅಗತ್ಯತೆ ಇಲ್ಲ.

a.ಸರಿ b.ತಪ್ಪು

3. ಯೇಸು ಹೀಗೆ ಬೋಧಿಸಿದನು.

a.ನನ್ನ ಮೇಲೆ ಮಾತ್ರ ನಂಬಿಕೆಯನ್ನಿಡಿ

b.ನಂಬಿಕೆಯನ್ನಿರಿಸಿ, ಜೀವಿತವನ್ನು ಬದಲಾಯಿಸಿಕೊಂಡು ಮಾನಸಾಂತರ ಹೊಂದಿ

c.ಶಿಷ್ಯರನ್ನಾಗಿ ಮಾಡಿ ಮತ್ತು ದೀಕ್ಷಾಸ್ನಾನ ಮಾಡಿಸಿ

d. a ಮತ್ತು b

e.Bಮತ್ತು C

4.ಇವುಗಳಲ್ಲಿ ಒಂದು, ಬದಲಾವಣೆಯನ್ನು ನಮ್ಮ ಜೀವಿತದಲ್ಲಿ ಯೇಸು ಕೋರುತ್ತಿದ್ದಾನೆ.

a.ಸ್ವಂತ ವಿಷಯದಲ್ಲಿ

b.ನೆರೆಯವನನ್ನು ಕುರಿತು

**c.**ದೇವರ ವಿಷಯದಲ್ಲಿ

**d.**ಮೇಲಿನ  ಎಲ್ಲವೂ

5.ಯೇಸುವನ್ನು ಕುರಿತು ಸಾಕ್ಷಿ ಹೇಳುತ್ತಾ ಅಪೊಸ್ತಲನಾದ ಯೋಹಾನನು ಏನು ಹೇಳಿದನು?

**a.**ಆತನ್ನು ನಾನು ನೋಡಿದೆನು.

**b.**ಆತನನ್ನು ಕಿವಿಯಾರೆ ಕೇಳಿದೆವು.

**c.**ಆತನನ್ನು ಕೈಯಿಂದ ಮುಟ್ಟಿದ್ದೇವೆ.

**d.**ಮೇಲಿನ ಎಲ್ಲವೂ.

***

## ಪಾಠ–19

## ವಿಧೇಯತೆಯು ಪ್ರೀತಿಗೆ ಗುರುತು

ದೇವರಲ್ಲಿ ನಂಬಿಕೆ ಇಡುವಂತೆ ಯೇಸು ಪ್ರೀತಿ, ವಿಶ್ವಾಸವನ್ನು ಕುರಿತ ಸಂದೇಶವನ್ನು ಉಪದೇಶಿಸಿದನು. ಲೋಕದ ಮಾರ್ಗಗಳು ಮತ್ತು ಪಾಪಗಳಿಂದ ನಮ್ಮ ಜೀವಿತಗಳನ್ನು ಜೀವನ ಶೈಲಿಗಳನ್ನು ಬದಲಾಯಿಸಿಕೊಂಡು ತಂದೆ, ಮಗನು, ಪವಿತ್ರಾತ್ಮನೊಂದಿಗೆ ಸಮಧಾನ ಹೊಂದುವುಂದಿ ಆತನ ಆಜ್ಞೆಗಳಿಗೆ ಒಳಗಾಗಬೇಕು.

ಪ್ರೀತಿಯಿಂದ ಬಂದ ವಿಧೇಯತೆಯು, ಅದರಿಂದ ಒಪ್ಪಂದದಿಂದ ಉಂಟಾದದಲ್ಲ. ವಿಧೇಯತೆಯು ನಿನ್ನ ಮೇಲೆ ಪ್ರಯೋಗಿಸುವಂತದ್ದಲ್ಲ ಅಥವಾ ಆರ್ಥಿಕ ಸಹಾಯದಿಂದ ಬಂದಂತದ್ದಲ್ಲ. ಆಪೇಕ್ಷಿರುವಂತದ್ದು, ಮನವಿ ಮಾಡಿರುವಂದ್ದು, ಆ ಕಾರಣವಾಗಿ, ಅಥವಾ ಅವಷ್ಯಕತೆ ಇಲ್ಲದೇ ಪ್ರೀತಿ ಪ್ರದರ್ಶಿಸುತ್ತದೆ. ವಿಧೇಯತೆ ಇರುವ ಪ್ರೀತಿಯು ಸ್ವಾ ಇಚ್ಚೆಯಾಗಿ ಉಂಟಾಗುವ ಒಂದು ಕ್ರಿಯೆ ಯಾಕೆಂದರೆ ನೀನು ಪ್ರೀತಿಸುವವರು ಕೋರಿರುವ ಮತ್ತು ಅವರನ್ನು ನೀನು ಸಂತೋಷಪಡಿಸಬೇಕು.

ಇಂತಹ ವಿಧೇಯತೆಯನ್ನು ಕುರಿತಾದ ಅನೇಕ ಉದಾಹರಣೆಗಳನ್ನು ಮೊದಲ ಪಾಠಗಳಲ್ಲಿ ಗಮನಿಸಿದ್ದೇವೆ ಅವುಗಳಲ್ಲಿ ಕೆಲವು:

* ಒಂದು ನಿರ್ದಿಷ್ಟವಾದ ಕಾಲದಲ್ಲಿ ನಾವೆಯನ್ನು ನಿರ್ಮಿಸುವುದಕ್ಕೆ ನೋಹಾನನು ಅನೇಕ ವರ್ಷಗಳ ವರೆಗೂ ಕೆಲಸ ಮಾಡಿದನು.

* ಜಲಪ್ರಳಯದ ನಂತರ ಆರಿದ ನೆಲದ ಮೇಲೆ ತಿರಿಗೆ ಹೆಜ್ಜೆಯನ್ನಿಟ್ಟಾಗ ನೋಹಾನನು ಒಂದು ಯಜ್ಞ ವೇದಿಯನ್ನು ಮಾಡಿ ದೇವರಿಗೆ ಸರ್ವಾಂಗಹೋಮ ಮಾಡಿದನು. ಇದನ್ನು ದೇವರ ಮೇಲಿನ ಪ್ರೀತಿಯಿಂದಲೇ ಮಾಡಿದನು.

* ಅಬ್ರಹಾಮನು ತನ್ನ ಒಬ್ಬನೇ ಮಗನನ್ನು ಬಲಿಕೊಡಲು ಬೆಟ್ಟದ ಮೇಲೆ ಕರೆದುಕೊಂಡು ಹೋದನು. ಮನುಷ್ಯರ ದೃಷ್ಟಿಯಲ್ಲಿ ಇದು ಒಂದು ಹತ್ಯೆ. ಆದ್ದರಿಂದ ಸಾಧಾರಣ ಮನುಷ್ಯನು ಇದನ್ನು ಮಾಡಲಾರನು ಆದರೆ ದೇವರಲ್ಲಿ ಅಬ್ರಹಾಮನಿಗೆ ಉಂಟಾದ ಪರಿಪೂರ್ಣವಾದ ನಂಬಿಕೆಯ ಆಧಾರದ ಮೇಲೆ ಇದನ್ನು ಮಾಡಿದನು.

* ಫರೋಹನು ತನ್ನ ಸೈನ್ಯವನ್ನು ಕಳುಹಿಸುವಾಗ ಇಸ್ರಾಯೇಲರು ಕೆಂಪು ಸಮುದ್ರದ ಹತ್ತಿರ ಬಂದಾಗ ಭಯಪಟ್ಟರು ಇಸ್ರಾಯೇಲರು ಸಮುದ್ರವನ್ನು ದಾಟುವುದಕ್ಕೆ ಇಲ್ಲಿ ಏನಾದರು ಮಾಯೆ ನಡೆಯುತ್ತದೆ ಎಂದು ಯಾರಾದರು ಅಂದುಕೊಂಡಿದ್ರ? ಆದರೆ ಮೋಶೆ ತನ್ನ ವಿಶ್ವಾಸವು ಮತ್ತು

ಅತನು ಪ್ರೀತಿಸುವ ದೇವರ ಮೇಲೆ ತನಗಿರುವ ನಂಬಿಕೆಯಿಂದ ದೇವರಿಗೆ ಒಳಗಾದನು. ಆದ್ದರಿಂದ ಅವರು ಸಮುದ್ರ ದಾಟುವುದಕ್ಕೆ ಸಮುದ್ರ ದಾರಿ ಮಾಡಿತು.

* ಯೇಸು ಮಾಡಿದ ಅದ್ಭುತಕಾರ್ಯಗಳೆಲ್ಲವೂ ಮತ್ತು 3ವರ್ಷದ ಆತನ ಬೋಧನೆ, ಉಪದೇಶಗಳೆಲ್ಲಾವೂ ಆತನು ದೇವರ ಮಗನೆಂದು ನಿರೋಪಿಸಿದವು. ಕೊನೆಯ ಸಂದರ್ಭದಲ್ಲಿ ಸಹ ಯೆರೂಸಲೇಮ್‌ಗೆ ಮುಖ ಮಾಡಿದನು. ಯೆಹೂದ್ಯರು, ರೋಮಾ ಸೈನಿಕರ ಸಹಾಯದೊಂದಿಗೆ ಆತನನ್ನು ಸಾಯಿಸುವರು ಎಂದು ಗೊತ್ತಿದ್ದರೂ ಅಲ್ಲಿಗೆ ಹೋಗುವುದಕ್ಕೆ ನಿರ್ಣಯಿಸಿಕೊಂಡನು, ಆತನು ಇಷ್ಟ ಪೂರ್ವಕವಾಗಿಯೇ ತನ್ನ ಪ್ರಾಣವನ್ನು ಕೊಡುವುದಕ್ಕೆ ಯೆರೂಸಲೇಮಿಗೆ ಹೋದನು. ಇದಕೋಸ್ಕರನೇ ಅತನು ಪರಲೋಕವನ್ನು ಬಿಟ್ಟು ಭೂಲೋಕಕ್ಕೆ ಬಂದನು. ತನಗೆ ಎದುರಾಗಿದ್ದ ಶಿಲುಬೆ ಮರಣವನ್ನು ಕುರಿತು ತನ್ನ ಪರಿಪೂರ್ಣ ವಿಧೇಯತೆ, ಆತನು ಮಾಡಿದ ಪ್ರಾರ್ಥನೆಯಲ್ಲಿ ಕಾಣಬಹುದು "ತಿರಿಗಿ ಆತನು ಎರಡನೆಯ ಸಾರಿ ಹೋಗಿ– ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆ ಮಾಡಿದನು"(ಮತ್ತಾಯ26:42).

ಕರ್ತನಾದ ಯೇಸು ತನ್ನ ತಂದೆಯಾದ ದೇವರನ್ನು ಪ್ರೀತಿಸಿದನು ಆದ್ದರಿಂದ ಆತನಿಗೆ ವಿಧೇಯನಾದನು ತಂದೆ ಚಿತ್ತವನ್ನು ನೆರೆವೇರಿಸಿದನು. ಅದೇರೀತಿಯಾಗಿ ಅಪೊಸ್ತಲರು ಕರ್ತನನ್ನು ಪ್ರೀತಿಸಿದರು ಆದ್ದರಿಂದ ಕರ್ತನಿಗೆ, ಆತನ ಮಾತುಗಳಿಗೆ ವಿಧೇಯರಾದರು. ಆದ್ದರಿಂದ ನಾವು ಸಹ ನಿಜವಾಗಿ ದೇವರನ್ನು ಪ್ರೀತಿಸುವವರಾದರೆ/ಪ್ರೀತಿಸುತ್ತಿದ್ದರೆ ಆತನ ಲೇಖನೆಗಳಲ್ಲಿ ಹೇಳಿರುವ ಸಂದೇಶಗಳಿಗೆ ಒಳಪಡುವೆವು. ಆತನನ್ನು ಪ್ರೀತಿಸುತ್ತಾ ವಾಕ್ಯಗಳಿಗೆ ಒಳಗಾಗದಿದ್ದರೆ ನಾವು ಸತ್ಯವನ್ನು ನೆರವೇರಿಸುವವರಲ್ಲ.

ಆದ್ದರಿಂದ ನಾವು ದೇವರೊಂದಿಗೆ ಸಮಾಧಾನ ಹೊಂದುವುದಕ್ಕೆ ಒಳಪಡುವ ಅವಶ್ಯಕತೆ ಬಂದಾಗ ಅದರಲ್ಲಿ ಯಾವ ಕಾರಣವಿಲ್ಲದೆ ಆತನನ್ನು ಪ್ರೀತಿಸುತ್ತಿದ್ದೇವೆ ಆದ್ದರಿಂದ ಆತನಿಗೆ ಒಳಪಡಬೇಕು. ಯೇಸುವಂತೆ "ನಿನ್ನ ಚಿತ್ತವೇ ಆಗಲಿ.....!" ಎಂದು ಯೇಸು ಹೇಳಿದಂತೆ ನಾವು ಒಳಪಡೋಣ.

ಪ್ರಶ್ನೆಗಳು:

1.ನಾವು ಇತರರೊಂದಿಗೆ ಪ್ರೀತಿಯೊಂದಿಗೆ ಇದ್ದೇವೆಂದರೆ ಅವರು ಬಯಸಿದವುಗಳನ್ನು ಮಾಡುವುದು ಯಾಕೆಂದರೆ.

a.ಇದೇ ಒಳ್ಳೆ ಕೆಲಸ ಎಂದು ನಾವು ಅಂದುಕೊಳ್ಳುತ್ತೇವೆ.

b.ಎಲ್ಲವುಗಳಲ್ಲಿ ಇದೇ ಒಳ್ಳೇದು ಎಂದು ಅಂದುಕೊಳ್ಳುತ್ತೇವೆ.

**c.**ನಾವು ಪ್ರೀತಿಸುವವರನ್ನು  ಇದು ಸಂತೋಷಪಡಿಸುತ್ತದೆ.

2.ಕುಟುಂಬದ ಒತ್ತಡಗಳು, ಆರ್ಥಿಕ ಅಥವಾ ರಾಜಕೀಯ ಸಹಾಯಗಳು, ಭಯ, ಅಥವಾ ಬಹುಮಾನಗಳಿಂದ ಪ್ರೀತಿಯನ್ನು ಪಡೆಯಬಹುದು.

**a.**ಸರಿ **b.**ತಪ್ಪು

3.ಆತನನ್ನು ಹಿಡಿಯುವರು ಎಂದು ಗೊತ್ತಿದ್ದರೂ ಪಸ್ಕ ಹಬ್ಬವನ್ನು ಆಚರಿಸುವುದಕ್ಕೆ ಯೇಸು ಯೆರೂಸಲೇಮಿಗೆ ಹೋದನು.

**a.**ಸರಿ **b.**ತಪ್ಪು

4.ರಕ್ಷಣೆಯನ್ನು ಕುರಿತು ಯೇಸುವಿನ ಬೋಧನೆಗೆ ನಮ್ಮ ಸ್ಪಂದನೆಯು ಆತನು ಮೆಚ್ಚುವಂತದ್ದಾಗಿರಬೇಕು.

**a.**ಸರಿ **b.**ತಪ್ಪು

5.ಯೇಸುವಿನ ಆಜ್ಞೆಗಳಿಗೆ ಒಳಗಾಗದೆ ಹೋದರೂ ಪ್ರತಿಯೊಬ್ಬರೂ ದೇವರೊಂದಿಗೆ ಸಮಾಧಾನ ಹೊಂದುವರು. ಯಾಕೆಂದರೆ ಮನುಷ್ಯರೆಲ್ಲರಿಗೋಸ್ಕರ ಯೇಸು ಮರಣಿಸಿದನು.

**a.**ಸರಿ **b.**ತಪ್ಪು

***

## ಪಾಠ–20

### ಕ್ರಿಸ್ತನು ಸ್ಥಾಪಿಸಿರುವ ಸಭೆಯಲ್ಲಿ ಜನರು ಸೇರಿಸಲ್ಪಟ್ಟರು.

**ಮೊದಲ ಸಭೆಯ ಸದಸ್ಯರು:**

ಯೇಸು ತನ್ನ ತಂದೆಯೊಂದಿಗೆ ಇರುವುದಕ್ಕೆ ತಿರಿಗಿ ಪರಲೋಕಕ್ಕೆ ಹೋಗುವುದಕ್ಕಿಂತ ಮುಂಚೆ "ಕ್ರಿಸ್ತನು ಶ್ರಮೆ ಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪ ಪರಿಹಾರಕ್ಕೋಸ್ಕರ ದೇವರ ಕಡೆತಿರಿಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೆ ಸಾಕ್ಷಿ ಹೇಳುವವರಾಗಿದ್ದೀರಿ. ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿ ಕೊಡತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ ಎಂದು ಹೇಳಿದನು"(ಲೂಕ24:46–49).

"ಆಗ ಅವರು ಎಣ್ಣೇಮರಗಳ ತೋಪು ಎನಿಸಿಕೊಳ್ಳುವ ಗುಡ್ಡದಿಂದ ಯೆರೂಸಲೇಮಿಗೆ ಹಿಂತಿರುಗಿದರು ಬಂದರು. ಆ ಗುಡ್ಡಕ್ಕೂ ಯೆರೂಸಲೇಮಿಗೂ ಸಬ್ಬತ್ ದಿನದಲ್ಲಿ ಪ್ರಯಾಣಮಾಡುವಷ್ಟು ದೂರ"(ಅ.ಕೃ1:12).

ಯೇಸು ಪರಲೋಕ್ಕೆ ಏರಿಹೋದ ಹತ್ತು ದಿನದ ನಂತರ ಯೆರೂಸಲೇಮಿನಲ್ಲಿ 12ಮಂದಿ ಮೇಲಂತಸ್ಥಿನಲ್ಲಿ ಕೂತು ಕೊಂಡರು. ಪವಿತ್ರಾತ್ಮ ಅವರ ಮೇಲೆ ಇಳಿದು ಬಂದಾಗ ಅವರು ಅವರಿಗೆ ಗೊತ್ತಿಲ್ಲದ ಅನ್ಯಭಾಷೆಗಳನ್ನು ಮಾತನಾಡುವುದಕ್ಕೆ ಪ್ರಾರಂಭಿಸಿದರು. ಆ ಸ್ಥಳಕ್ಕೆ ಜನರು ಸೇರಿ ಬಂದರು ಅಪೊಸ್ತಲರು ಶಿಲುಬೆಗೆ ಹಾಕಿದ ಮೆಸ್ಸಿಯಾನನ್ನು ಕುರಿತು ಹೇಳಿ "ಮಾನಸಾಂತರ ಮತ್ತು ಕ್ಷಮಾಪಣೆಯನ್ನು ಕುರಿತು ಪ್ರಸಂಗಿಸಿದನು.

**ಪಂಚಾಶತ್ತಮ ದಿನ:**

ಯೆಹೂದ್ಯರ ಪ್ರಶ್ನೆಗೆ ಪೇತ್ರನು ಈ ರೀತಿಯಾಗಿ ಉತ್ತರಿಸಿದನು. "ಪೇತ್ರನು ಅವರಿಗೆ– ನಿಮ್ಮ ಪಾಪಗಳು ಪರಿಹಾರವಾಗುವುದಕ್ಕೆ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ"(ಅ.ಕೃ2:38).

"ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿ ನುಡಿದು–ವಕ್ರ ಬುದ್ದಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಹೆಚ್ಚರಿಸಿದನು. ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು"(ಅ.ಕೃ2:40–41).

ಸಮಾರ್ಯಾದವರ ಮತ್ತು ಸಿಮೋನನು:

ಆದರೆ ಫಿಲಿಪ್ಪನು ದೇವರ ರಾಜ್ಯವನ್ನು ಕುರಿತು, ಯೇಸುವನ್ನು ಕುರಿತು ಸುವಾರ್ತೆಯನ್ನು ಪ್ರಟತಿಸುತ್ತಿರುವಾಗ ಅವರು ಆತನನ್ನು ನಂಬಿ ಪರುಷರು ಮತ್ತು ಸ್ತ್ರೀಯರು ದೀಕ್ಷಾಸ್ನಾನ ಹೊಂದಿದರು. ಆಗ ಸೀಮೋನನು ಸಹ ನಂಬಿ ದೀಕ್ಷಾಸ್ನಾನ ಹೊಂದಿದನು. ಸೂಚಕ ಕ್ರಿಯೆಗಳು ಅದ್ಭುತ ಕ್ರಿಯೆಗಳು ನಡೆಯುವುದನ್ನು ನೋಡಿ ಆಶ್ಚರ್ಯಪಟ್ಟನು.

"ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು. ಆಗ ಸೀಮೋನನು ಕೂಡ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡು ಫಿಲಿಪ್ಪನ ಸಂಗಡ ಯಾವಾಗಲೂ ಇದ್ದು ಸೂಚಕಕಾರ್ಯಗಳೂ ಮಹತ್ಕಾರ್ಯಗಳು ಉಂಟಾಗುವುದನ್ನು ನೋಡಿ ಬೆರಗಾದನು"(ಅ.ಕೃ8:12–13).

"ಅಪೊಸ್ತಲರು ಕೈಗಳನ್ನಿಡುವುದರ ಮೂಲಕವಾಗಿ ಪವಿತ್ರಾತ್ಮ ದಾನವಾಗುವುದನ್ನು ಸೀಮೋನನು ಹಣವನ್ನು ತಂದು ಅವರ ಮುಂದಿಟ್ಟು–ನಾನು ಯಾರ ಮೇಲೆ ಕೈಗಳನ್ನಿಡುತ್ತೇನೋ ಅವರು ಪವಿತ್ರಾತ್ಮ ವರವನ್ನು ಹೊಂದುವಂತೆ ಈ ಅಧಿಕಾರವನ್ನು ನನಗೂ ಕೊಡಿರಿ ಅಂದನು. ಆದರೆ ಪೇತ್ರನು ಅವರಿಗೆ –ನಿನ್ನ ಬೆಳ್ಳಿಯು ನಿನ್ನ ಕೂಡ ಹಾಳಾಗಿಹೋಗಲಿ. ದೇವರ ವರವನ್ನು ಹಣಕ್ಕೆ ಕೊಂಡುಕೊಳ್ಳಬಹುದೆಂದು ಭಾವಿಸುತ್ತೀಯೋ? ಈ ಕಾರ್ಯದಲ್ಲಿ ನಿನಗೆ ಭಾಗವು ಇಲ್ಲ, ಪಾಲೂ ಇಲ್ಲ; ನಿನ್ನ ಹೃದಯವು ದೇವರ ಮುಂದೆ ಸರಿಯಿಲ್ಲ."(ಅ.ಕೃ8:18–22).

ಐಥಿಯೋಪ್ಯದವನಾದ ಕಂಚುಕಿಯೂ:

ಕಂದಾಕೆ ಕೆಳಗೆ ದೊಡ್ಡ ಅಧಿಕಾರಿಯೂ ಆದ ಈತನು ಕ್ರಿಸ್ತನನ್ನು ಕುರಿತು ಸುವಾರ್ತೆಯನ್ನು ಕೇಳಿ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡನು."ಫಿಲಿಪ್ಪನು ಓಡಿಹೋಗಿ ಆ ಮನುಷ್ಯನು ಯೆಶಾಯನ ಪ್ರವಾದಿಯ ಗ್ರಂಥವನ್ನು ಓದುತ್ತಿರುವುದನ್ನು ಕೇಳಿ–ಎಲೈ, ನೀನು ಓದುವುದು ನಿನಗೆ ತಿಳಿಯುತ್ತದೋ? ಅನ್ನಲು ಅವನು–ಯಾರಾದರೂ ನನಗೆ ಅರ್ಥ ತಿಳಿಸಿಕೊಟ್ಟ ಹೊರತು ಅದು ನನಗೆ ಹೇಗೆ ತಿಳಿದೀತು ಎಂದು ಹೇಳಿ–ನೀನು ರಥವನ್ನು ಹತ್ತಿ ನನ್ನ ಬಳಿಯಲ್ಲಿ ಕೂತುಕೋ ಎಂಬದಾಗಿ ಫಿಲಿಪ್ಪನನ್ನು ಕೇಳಿಕೊಂಡನು"(ಅ.ಕೃ8:30–31).

"ಫಿಲಿಪ್ಪನು ಉಪದೇಶಿಸುವುದಕ್ಕೆ ತೊಡಗಿ ಅದೇ ವಚನವನ್ನು ಆಧಾರ ಮಾಡಿಕೊಂಡು ಅವನಿಗೆ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದನು. ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿ ಬಂದರು. ಕಂಚುಕಿಯೂ–ಅಗೋ ನೀರು; ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು ಎಂದು ಹೇಳಿ ರಥವನ್ನು ನಿಲ್ಲಿಸು ಎಂದು

ಅಪ್ಪಣೆಕೊಟ್ಟನು; ಫಿಲಿಪ್ಪನು ಕಂಚುಕಿಯೂ ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು. ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ ಕರ್ತನು ಆತ್ಮ ಫಿಲಿಪ್ಪನನ್ನು ಎತ್ತಿಕೊಂಡು ಹೋಗಲಾಗಿ ಕಂಚುಕಿಯು ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಇಲ್ಲ"(ಅ.ಕೃ8:35–39).

ತಾರ್ಸದವನಾದ ಸೌಲನು:

"ಅವನು ಕರ್ತನೆ ಇಗೋ, ಇದ್ದೇನೆ ಅಂದನು. ಕರ್ತನು ಅವನಿಗೆ– ನೀನೆದ್ದು ನೆಟ್ಟನೆಬೀದಿ ಎಂಬ ಬೀದಿಗೆ ಹೋಗಿ ಯೂದನ ಮನೆಯಲ್ಲಿ ತಾರ್ಸದ ಸೌಲನೆಂಬುವನನ್ನು ವಿಚಾರಿಸು; ಅವನು ಪ್ರಾರ್ಥನೆ ಮಾಡುತ್ತಾನೆ. ಮತ್ತು ಅನನೀಯನೆಂಬ ಒಬ್ಬ ಮನುಷ್ಯನು ಒಳಗೆ ಬಂದು ತನಗೆ ತಿರಿಗಿ ಕಣ್ಣುಕಾಣುವಂತೆ ತನ್ನ ಮೇಲೆ ಕೈಯಿಡುವುದನ್ನು ನೋಡಿದ್ದಾನೆ ಎಂದು ಹೇಳಿದನು"(ಅ.ಕೃ9:11–12).

"ಆಗ ಅನನೀಯ ಹೊರಟು ಆ ಮನೆಯೊಳಗೆ ಹೋಗಿ ಅವನ ಮೇಲೆ ತನ್ನ ಕೈಗಳನ್ನಿಟ್ಟು – ಸಹೋದರನಾದ ಸೌಲನೇ, ನೀನು ಬಂದ ದಾರಿಯಲ್ಲಿ ನಿನಗೆ ಕಾಣಿಸಿಕೊಂಡ ಕರ್ತನಾದ ಯೇಸು ನೀನು ಕಣ್ಣುಕಾಣುವಂತೆಯೂ ನೀನು ಪವಿತ್ರಾತ್ಮ ಭರಿತನಾಗುವಂತೆಯೂ ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಿದನು. ಕೂಡಲೆ ಅವನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣು ಕಾಣಿಸಿದವು. ಅವನು ಎದ್ದು ದೀಕ್ಷಾಸ್ನಾನ ಮಾಡಿಸಿಕೊಂಡನು. ತರುವಾಯ ಊಟ ಮಾಡಿ ಬಲ ಹೊಂದಿದನು. ಮುಂದೆ ಅವನು ದಮಸ್ಕದಲ್ಲಿದ್ದ ಶಿಷ್ಯರ ಸಂಗಡ ಕೆಲವು ದಿವಸ ಇದ್ದು ತಡಮಾಡದೆ ಸಭಾಮಂದಿರಗಳಲ್ಲಿ ಯೇಸುವಿನ ವಿಷಯವಾಗಿ ಆತನೇ ದೇವ ಕುಮಾರನೆಂದು ಸಾರುವುದಕ್ಕೆ ಪ್ರಾರಂಭಿಸಿದನು"(ಅ.ಕೃ9:17–20).

ಕೊರ್ನೇಲ್ಯನೆಂಬುವವನು:

"ಪೇತ್ರನು ಈ ಮಾತುಗಳನ್ನು ಇನ್ನೂ ಹೇಳುತ್ತಿರುವಾಗ ಅವನ ವಾಕ್ಯಗಳನ್ನು ಕೇಳಿದವರೆಲ್ಲರ ಮೇಲೆ ಪವಿತ್ರಾತ್ಮ ವರವು ಇಳಿಯಿತು. ಅವರು ನಾನಾ ಭಾಷೆಗಳನ್ನಾಡುತ್ತಾ ದೇವರನ್ನು ಕೊಂಡಾದುತ್ತ ಇರುವುದನ್ನು ಪೇತ್ರನ ಸಂಗಡ ಬಂದಿದ್ದ ಯೆಹೂದ್ಯರಾದ ವಿಶ್ವಾಸಿಗಳು ಕೇಳಿದಾಗ–ಅನ್ಯಜನಗಳಿಗೂ ಪವಿತ್ರಾತ್ಮದಾನ ಮಾಡಲ್ಪಟ್ಟಿದೆಯಲ್ಲಾ ಎಂದು ಅತ್ಯಾಶ್ಚರ್ಯಪಟ್ಟರು. ನಡೆದ ಸಂಗತಿಗಳನ್ನು ಪೇತ್ರನು ನೋಡಿ –ನಮ್ಮ ಹಾಗೆ ಪವಿತ್ರಾತ್ಮವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ ಎಂದು ಹೇಳಿ ಅವರಿಗೆ– ನೀವು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಅಪ್ಪಣೆ ಕೊಟ್ಟನು. ಆ ಮೇಲೆ ಅವರು ಅವನನ್ನು –ಇನ್ನೂ ಕೆಲವು ದಿವಸ ಇರಬೇಕೆಂದು ಬೇಡಿಕೊಂಡರು"(ಅ.ಕೃ10:44–48).

ಲುದ್ಯಳೆಂಬ ಒಬ್ಬ ಸ್ತ್ರೀಯು:

"ನಮ್ಮ ಮಾತುಗಳನ್ನು ಕೇಳಿದವರಲ್ಲಿ ಲುದ್ಯಳೆಂಬ ಒಬ್ಬ ಸ್ತ್ರೀಯು ಇದ್ದಳು. ಪೌಲನು ಹೇಳಿದ ಮಾತುಗಳಿಗೆ ಲಕ್ಷ್ಯಕೊಡುವುದಕ್ಕೆ ಕರ್ತನು ಆಕೆಯ ಹೃದಯವನ್ನು ತೆರೆದನು. ಆಕೆಯೂ ಆಕೆಯ ಮನೆಯವರೂ ದೀಕ್ಷಾಸ್ನಾನ ಮಾಡಿಸಿಕೊಂಡ ಮೇಲೆ ಆಕೆ–ನಾನು ಕರ್ತನನ್ನು ನಂಬಿದವಳೆಂದು ನಿಶ್ಚಯಿಸಿಕೊಂಡಿದ್ದರೆ ನನ್ನ ಮನೆಯಲ್ಲಿ ಇರ್ರಿ ಎಂದು ಬೇಡಿಕೊಂಡು ನಮ್ಮನ್ನು ಬಲವಂತ ಮಾಡಿದಳು"(ಅ.ಕೃ16:14–15).

ಫಿಲಿಪ್ಪಿಯಲ್ಲಿನ ಸೆರೆಯ ಯಜಮಾನನು:

"ಅವನು–ದೀಪ ತರಬೇಕೆಂದು ಕೂಗಿ ಒಳಕ್ಕೆ ಹಾರಿ ನಡುಗುತ್ತಾ ಪೌಲ ಸೀಲರ ಮುಂದೆ ಬಿದ್ದನು. ಮತ್ತು ಅವರನ್ನು ಹೊರಗೆ ಕರಕೊಂಡು ಬಂದು–ಸ್ವಾಮಿಗಳೇ ನಾನು ರಕ್ಷಣೆ ಹೊಂದುವುದಕ್ಕೆ ಏನು ಮಾಡಬೇಕೆಂದು ಕೇಳಲು ಅವರು–ಕರ್ತನಾದ ಯೇಸುವಿನ ಹೆಸರಿನಲ್ಲಿ ನಂಬಕೆಯಿಡು. ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ ರಕ್ಷಣೆಹೊಂದುವರು ಎಂದು ಹೇಳಿ ಅವನಿಗೆ ಅವನ ಮನೆಯಲಿದ್ದವರೆಲ್ಲರಿಗೂ ದೇವರ ವಾಕ್ಯವನ್ನು ತಳಿಸಿದರು. ಆ ಮೇಲೆ ರಾತ್ರಿಯ ಅದೇ ಗಳಿಗೆಯಲ್ಲಿ ಅವರನ್ನು ಕರಕೊಂಡುಹೋಗಿ ಅವರ ಗಾಯಗಳನ್ನು ತೊಳೆದು ಕೊಡಲೆ ತನ್ನವರೆಲ್ಲಾರ ಸಹಿತವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು. ತರುವಾಯ ಅವರನ್ನು ತನ್ನ ಮನೆಗೆ ಕರಕೊಂಡುಹೋಗಿ ಊಟಮಾಡಿಸಿದನು. ಅವನು ತನ್ನ ಮನೆಯವರೆಲ್ಲರ ಸಂಗಡನಂಬಿ ಉಲ್ಲಾಸಗೊಂಡನು.

ಬೆಳಗಾದ ಮೇಲೆ ಅಧಿಪತಿಗಳು ಆ ಮನುಷ್ಯರನ್ನು ಬಿಟ್ಟುಬಿಡು ಎಂದು ಜವಾನರ ಕೈಯಲ್ಲಿ ಹೇಳಿಕಳುಹಿಸಿದರು. ಸೆರೇಯಜಮಾನನು ಈ ಮಾತನ್ನು ಪೌಲನಿಗೆ ತಿಳಿಸಿ–ಅಧಿಪತಿಗಳು ನಿಮ್ಮನ್ನು ಬಿಟ್ಟು ಬಿಡಬೇಕೆಂದು ಹೇಳಿಕಳುಹಿಸಿದ್ದಾರೆ, ಆದ್ದರಿಂದ ನೀವು ಈಗ ಸಮಾಧಾನದಿಂದ ಹೊರಟುಹೋಗಿರಿ ಎಂದು ಹೇಳಿದನು. ಅದಕ್ಕೆ ಪೌಲನು–ಅವರು ವಿಚಾರಣೆಮಾಡದೆ ರೋಮಾಪುರದ ಹಕ್ಕುದಾರರಾದ ನಮ್ಮನ್ನು ಎಲ್ಲರ ಮುಂದೆ ಹೊಡಿಸಿ ಸೆರೆಮನೆಯೊಳಗೆ ಹಾಕಿಸಿದರು. ಈಗ ನಮ್ಮನ್ನು ಗುಪ್ತವಾಗಿ ಹೊರಗೆ ಕಳುಹಿಸಿತ್ತಾರೋ? ಹಾಗೆ ಎಂದಿಗೂ ಆಗ ಕೂಡದು; ಅವರೇ ಬಂದು ನಮ್ಮನು ಹೊರಗೆ ಕರಕೊಂಡು ಹೋದರೆ ಸರಿ ಎಂದು ಹೇಳಿದರು. ಜವಾನರು ಈ ಮಾತುಗಳನ್ನು ಅಧಿಪತಿಗಳಿಗೆ ತಿಳಿಸಿದಾಗ ರೋಮಾಪುರದವರ ಹಕ್ಕುದಾರರು ಎಂಬ ಮಾತನ್ನು ಅವರು ಕೇಳಿ ಭಯಪಟ್ಟರು; ಮತ್ತು ಅವರ ಬಳಿಗೆ ಹೋಗಿ ವಿನಯವಾಗಿ ಮಾತಾಡಿ ಹೊರಕ್ಕೆ ಕರೆದುಕೊಂಡು ಬಂದು–ನೀವು ಊರನ್ನು ಬಿಟ್ಟುಹೋಗಬೇಕೆಂದು ಬೇಡಿಕೊಂಡರು"(ಅ.ಕೃ16:29–38).

ಯೋಹಾನನ ಶಿಷ್ಯರು:

“ಆಪೊಲ್ಲೋಸನು  ಕೊರಿಂಥದಲ್ಲಿದ್ದಾಗ ಪೌಲನು ಮಲೆನಾಡಿನಲ್ಲಿ ಸಂಚಾರಮಾಡಿ ಎಫೆಸಕ್ಕೆ ಬಂದು ಕೆಲವು ಮಂದಿ ಶಿಷ್ಯರನ್ನು ಕಂಡು–ನೀವು ನಂಬಿದಾಗ ಪವಿತ್ರಾತ್ಮವರವನ್ನು ಹೊಂದಿದಿರೋ ಎಂದು ಅವರನ್ನು ಕೇಳಲು ಅವರು ಅವನಿಗೆ ಇಲ್ಲ, ಪವಿತ್ರಾತ್ಮವರವು ಉಂಟೆಂಬುದನ್ನೇ ನಾವು ಕೇಳಲಿಲ್ಲ ಅಂದರು. ಅವನು–ನೀವು ಯಾವದನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡಿರಿ ಎಂದು ಕೇಳಿದ್ದಕ್ಕೆ ಅವರು–ಯೋಹಾನನ ಬೋಧನೆಯನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡೆವು ಅಂದರು. ಅದಕ್ಕೆ ಪೌಲನು–ಯೋಹಾನನು ದೇವರ ಕಡೆಗೆ ತಿರಿಗಿಕೊಂಡವರಿಗೆ ದೀಕ್ಷಾಸ್ನಾನ ಮಾಡಿಸಿ ತನ್ನ ಹಿಂದೆ ಬರುವಾತನಲ್ಲಿ ಅಂದರೆ ಯೇಸುವಿಲ್ಲಿ ನಂಬಿಕೆ ಇಡಬೇಕೆಂಬದಾಗಿ ಜನರಿಗೆ ಹೇಳಿದನು ಎಂದು ಹೇಳಲು ಅವರು ಆ ಮಾತನ್ನು ಕೇಳಿ ಕರ್ತನಾದ ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು”(ಅ.ಕೃ19:1–5).

“ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವುದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದ್ದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಂತವಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸದೃಶವಾದ ಮರಣ ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸಾದೃಶ್ಯವಾದ ಪುನರುತ್ಥಾನವನ್ನು ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನಸ್ವಾಭಾವವು ನಾಶವಾಗಿ ನಾವು ಇನ್ನು ಪಾಪದವಶದಲ್ಲಿರದಂತೆ ನಮ್ಮ ಪೂರ್ವ ಸ್ವಭಾವವು ಕ್ರಿಸ್ತನ ಕೊಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ”(ರೋಮಾ6:3–6).

ಪ್ರಶ್ನೆಗಳು;

1.ಪಂಚಾಶತ್ತಮ ದಿನ ಪವಿತ್ರಾತ್ಮನು ಅವರ ಮೇಲೆ ಬಂದಾಗ 3000 ಸಾವಿರ ಜನ ದೀಕ್ಷಾಸ್ನಾನ ಹೊಂದಿದರು.

**a.**ಸರಿ **b.**ತಪ್ಪು

2.ಮಾರು ಮನಸ್ಸುಹೊಂದಿ ದೀಕ್ಷಾಸ್ನಾನ ಹೊಂದಬೇಕೆಂದು ಪಂಚಾಶತ್ತಮ ದಿನದಂದು ಪೇತ್ರನು ಪ್ರಸಂಗಿಸಿದನು.

**a.**ಸರಿ **b.**ತಪ್ಪು

3.ಪವಿತ್ರಾತ್ಮನು ನೇರವಾಗಿ ಬಂದಾಗ ತಾರ್ಸದವನಾದ ಪೌಲನು ಅಪೊಸ್ತಲನಾಗಿ ಬದಲಾದನು.

**a.**ಸರಿ **b.**ತಪ್ಪು

4. ಫಿಲಿಪ್ಪನು ಐಥೀಯೂಪಿಯ ಮಾರ್ಗದಲ್ಲಿ ಹೋಗುವಾಗ ನೀರನ್ನು ಒಂದು ಪಾತ್ರೆಯಲ್ಲಿ ತೆಗೆದುಕೊಂಡು ಬಂದು ಕಂಚುಕಿಯ ತಲೆಯ ಮೇಲೆ ಹಾಕಿ ಆತನಿಗೆ ದೀಕ್ಷಾಸ್ನಾನ ಮಾಡಿಸಿದನು.

**a.**ಸರಿ **b.**ತಪ್ಪು

5.ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದವರನ್ನು ಕುರಿತು ರೋಮಾ ಪತ್ರಿಕೆಯಲ್ಲಿ ಪೌಲನು ಈ ರೀತಿ ತಿಳಿಸಿದನು.

**a.**ಮರಣದೊಳಗೆ ದೀಕ್ಷಾಸ್ನಾನ

**b.**ಆತನ ಪುನರುತ್ಥಾನದೊಳಗೆ ದೀಕ್ಷಾಸ್ನಾನ

**c.**ನೂತನ ಜೀವವನ್ನು ಹೊಂದುವುದು

**d.**ಮೇಲಿನ ಎಲ್ಲವೂ.

***